ANANTHKUMAR
PRATISHTHANA

# ಅನಂತಪಥ

ಪುಟ 6
ವ್ಯಕ್ತಿ ವಿಶೇಷ ಮಾಲಿಕೆ
ಶ್ರೀ ಏಕನಾಥ ರಾನಡೆ



ಸಂಪುಟ - 4 ಜೂನ್ - 2024 ಸಂಚಿಕೆ - 48

# ರಾಮಜನ್ಮಭೂಮಿಯಲ್ಲಿ ಅನಂತ ಸಸ್ಯಾಗ್ರಹ

ಶ್ರೀ ರಾಮ ಜನ್ಮಭೂಮಿಯ ವಿಮೋಚನೆಗಾಗಿ ನಡೆದ ಚಳವಳಿಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸಕ್ರಿಯವಾಗಿ ಅನಂತಕುಮಾರ್ ಭಾಗವಹಿಸಿದ್ದರು. ನ್ಯಾಯಾಲಯಗಳ ಒಳಹೊರಗೆ ನಡೆದ ಹೋರಾಟಗಳ ನಂತರ ಈ ವರ್ಷದ ಜನವರಿ ೨೨ರಂದು ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನಾ ಕಾರ್ಯ "ನ ಭೂತೋ ನ ಭವಿಷ್ಯತಿ" ಎಂಬ ರೀತಿಯಲ್ಲಿ ವೈಭವದಿಂದ ನಡೆಯಿತು. ಅಯೋಧ್ಯೆಯಲ್ಲಿ ದೇವಾಲಯ ನಿರ್ಮಾಣದ ಜೊತೆ ಜೊತೆಗೆ ಅಗಾಧಮಟ್ಟದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ನಗರೀಕರಣಕ್ಕೆ ಒತ್ತು ನೀಡುವ ಇಂತಹ ಅಭಿವೃದ್ಧಿ ಕಾರ್ಯಗಳಿಗೆ ಯಾವಾಗಲೂ ಮೊದಲ ಬಲಿಯಾಗುವುದೆಂದರೆ, ಅಲ್ಲಿರುವ ಸಸ್ಯರಾಶಿ. ಅನಂತಕುಮಾರ್ ಬದುಕಿರುತ್ತಿದ್ದರೆ ಬಹುಶಃ ಅಯೋಧ್ಯೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ಅಷ್ಟೇ ಸಹಜವಾಗಿ ಅಯೋಧ್ಯೆಯಲ್ಲಿ ಹಸಿರನ್ನು ಉಳಿಸಿ ಬೆಳೆಸುವುದಕ್ಕೂ ಆದ್ಯತೆ ನೀಡುತ್ತಿದ್ದರು. ರಾಮಜನ್ಮಭೂಮಿಯ ಪುನರುತ್ಥಾನದ ವಿಷಯದಲ್ಲಿ ಅನಂತಕುಮಾರರಿಗಿದ್ದ ಕಾಳಜಿಯನ್ನೂ ಅವರ ನಿರಂತರ ಪ್ರಕೃತಿಪ್ರೇಮವನ್ನೂ ಅನುಲಕ್ಷಿಸಿ ಅದಮ್ಯ ಚೇತನ ಸಂಸ್ಥೆಯು ಅಯೋಧ್ಯೆಯಲ್ಲಿ ವಿಶಿಷ್ಟವಾದ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತು. ವಿಶ್ವ ಪರಿಸರ ದಿನವಾದ ಜೂನ್ ಐದರಂದು ಅಯೋಧ್ಯೆಯಲ್ಲಿ ೧೦೦ ಗಿಡಗಳನ್ನು ನೆಡುವ ಮೂಲಕ ಶ್ರೀರಾಮನ ಜನ್ಮಸ್ಥಾನಕ್ಕೂ ತನ್ನ ಸಸ್ಯಾಗ್ರಹ ಕಾರ್ಯಕ್ರಮವನ್ನು ವಿಸ್ತರಿಸಿತು. ಅಯೋಧ್ಯಾನಗರಿಯೇ ಒಂದು ಪಾವನ ಕ್ಷೇತ್ರ. ಅದರಲ್ಲಿಯೂ ಸರಯೂ ನದಿಯ ಗುಪ್ತಾರ್ ಘಾಟ್ ಇನ್ನೂ ಪವಿತ್ರವಾದ ಸ್ಥಳ. ಅಲ್ಲಿಯೇ ಶ್ರೀರಾಮನು ಜಲಸಮಾಧಿಯ ಮೂಲಕ ತನ್ನ ದೇಹವನ್ನು ತ್ಯಜಿಸಿದ ಎಂದು ಹೇಳುತ್ತಾರೆ. ರಾಮ ದೇವಾಲಯ, ಚಕ್ರಹಾರಿ ದೇವಾಲಯ ಮತ್ತು ನರಸಿಂಹ ದೇವಾಲಯ ಮುಂತಾದ ಅನೇಕ ಪ್ರಮುಖ ದೇವಾಲಯಗಳೂ ಇಲ್ಲಿವೆ.




ಇದರ ಜೊತೆಗೆ ಈ ಜಾಗಕ್ಕೆ ಇನ್ನೊಂದು ಮಹತ್ವವಿದೆ. ಫೈಜಾಬಾದ್ ನಗರದ ರಾಮ್ ಭವನ್ ಎಂಬ ಕಟ್ಟಡದ ಹಿಂದಿನ ಬಾಡಿಗೆ ಕೋಣೆಯೊಂದರಲ್ಲಿ "ಗುಮ್ನಾಮಿ ಬಾಬಾ" ಎಂಬ ಸಜ್ಜನರು ವಾಸವಿದ್ದರು. ಇವರು ೧೬/೦೯/೧೯೮೫ರಂದು ನಿಧನರಾದರು. ಸುಭಾಶ್ ಚಂದ್ರ ಬೋಸರು ವಿಮಾನ ದುರಂತದಲ್ಲಿ ಮರಣ ಹೊಂದಿದರೆಂಬ ಸುದ್ದಿಯನ್ನು ನಂಬಲೊಪ್ಪದ ಅವರ ಅಭಿಮಾನಿಗಳು, ಸುಭಾಶರು ಗುಮ್ನಾಮಿ ಬಾಬಾ ಎಂಬ ಹೆಸರಿನಲ್ಲಿ ಅನಾಮಧೇಯರಾಗಿ ಜೀವನವನ್ನು ಸಾಗಿಸಿದರು ಎಂದು ವಾದಿಸುತ್ತಾರೆ. ಸುಭಾಶ್ ಚಂದ್ರ ಬೋಸರು ಕೊನೆಯದಾಗಿ ಕಾಣಿಸಿಕೊಂಡ ಜಾಗ ಇದೇ ಗುಪ್ತಾರ್ ಘಾಟ್ ಎಂಬ ನಂಬಿಕೆಯಿಂದ ಅಭಿಮಾನಿಗಳು ಅಲ್ಲಿ ಪ್ರತಿವರ್ಷವೂ ಸುಭಾಶರ ಜನ್ಮದಿನದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ಪುಟ 4 ರಲ್ಲಿ ಮುಂದುವರಿದಿದೆ

# ನಮೋ 3.0




**ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿರುವ ಭಾರತದ ಪ್ರಧಾನಿಯಾಗಿ ದಾಖಲೆಯ ಮೂರನೇ ಬಾರಿ ಆಡಳಿತದ ಚುಕ್ಕಾಣಿ ಹಿಡಿದಿರುವ ಸನ್ಮಾನ್ಯ ನರೇಂದ್ರ ಮೋದಿಯವರಿಗೆ ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.**

# "ಸಾಮಾಜಿಕ ಸೇವೆಯೂ ಒಂದು ಪ್ರಮುಖ ಕ್ಷೇತ್ರ"

## ಪದವೀಧರ ವಿದ್ಯಾರ್ಥಿಗಳಿಗೆ ತೇಜಸ್ವಿನಿ ಅನಂತಕುಮಾರ್ ಮಾರ್ಗದರ್ಶನ



"ಹೊಸದಾಗಿ ಪದವಿ ಪಡೆದವರೆಲ್ಲರೂ ತಮ್ಮ ತಮ್ಮ ಜೀವನದ ಹೊಸ ಅಧ್ಯಾಯದ ಹೊಸ್ತಿಲಲ್ಲಿ ನಿಂತಿರುತ್ತಾರೆ, ಇಂಜಿನಿಯರಿಂಗ್ ವಿದ್ಯಾಭ್ಯಾಸದಲ್ಲಿ ಸಂಪಾದಿಸಿದ ಜ್ಞಾನ ಮತ್ತು ಕೌಶಲ್ಯಗಳು ವೈಯಕ್ತಿಕ ಯಶಸ್ಸಿಗೆ ಮಾತ್ರ ಸಾಧನಗಳಲ್ಲ, ಅವು ಸಮಾಜದ ಒಳಿತಿಗೆ ಕೊಡುಗೆ ನೀಡುವ ಸಾಧನಗಳೂ ಆಗಿವೆ" ಎಂದು ಕಲಬುರಗಿಯ ಪೂಜ್ಯ ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್(ಪಿಡಿಎ) ಕಾಲೇಜಿನಲ್ಲಿ ೨೦೨೪ರ ಮೇ ೨೬ರಂದು ನಡೆದ ೧೨ನೇ ಪದವಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥರೂ ಪಶ್ಚಿಮ ಬಂಗಾಲದ ಶಿಬಪುರದ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಹಾಗೂ

ಪುಟ 4 ರಲ್ಲಿ ಮುಂದುವರಿದಿದೆ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್

# ಸೋಮನಾಥಪುರದ ಕೇಶವ ದೇವಾಲಯ



ಹೊಯ್ಸಳ ವಾಸ್ತುಶಿಲ್ಪದ ಅತ್ಯುತ್ತಮ ಮಾದರಿಗಳಲ್ಲೊಂದು ಎಂಬ ಕಾರಣಕ್ಕಾಗಿಯೇ ಸೋಮನಾಥಪುರದ ಸುಪ್ರಸಿದ್ಧ ಕೇಶವ ದೇವಾಲಯವು ದರ್ಶನೀಯವಾಗಿದೆ. ಮೈಸೂರಿಗೆ ಸುಮಾರು ನಲವತ್ತು ಕಿಲೋಮೀಟರ್ ದೂರದಲ್ಲಿರುವ ಸೋಮನಾಥಪುರವನ್ನು ಬನ್ನೂರು ಮಾರ್ಗವಾಗಿ, ಇಲ್ಲವೇ ಟಿ. ನರಸೀಪುರ ಮಾರ್ಗವಾಗಿ ತಲುಪಬಹುದು.

ಕ್ರಿಸ್ತಶಕ ಹದಿಮೂರನೆಯ ಶತಮಾನದಲ್ಲಿ ಹೊಯ್ಸಳ ಅರಸ ಮುಮ್ಮಡಿ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಆತನ ಮಂತ್ರಿ ಸೋಮನಾಥ ದಂಡನಾಯಕನು ಸೋಮನಾಥಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ, ಇಲ್ಲಿ ಕೇಶವ ದೇವಾಲಯವನ್ನು 1268ರಲ್ಲಿ ಕಟ್ಟಿಸಿದನಂತೆ. ಅವನ ಹೆಸರನ್ನೇ ಪಡೆದುಕೊಂಡ ಅಗ್ರಹಾರವು ಸೋಮನಾಥಪುರವೆಂದು ಪ್ರಸಿದ್ಧಿಪಡೆಯಿತು. ಶಾಸನಗಳಲ್ಲಿ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಎಂದು ಕೀರ್ತಿತವಾದ ಈ ಅಗ್ರಹಾರದಲ್ಲಿ ಕೇಶವ ದೇವಾಲಯವೇ ಅಲ್ಲದೆ, ಪಂಚಲಿಂಗೇಶ್ವರ, ಸೋವಲೇಶ್ವರ, ನರಸಿಂಹೇಶ್ವರ ಮೊದಲಾದ ದೇವಾಲಯಗಳೂ ಇದ್ದುವು. ಈಶಾನ್ಯದಿಕ್ಕಿನಲ್ಲಿ ತಲಕಾಡಿನ ಕಡೆಗೆ ಹೋಗುವ ರಸ್ತೆಯ ಬದಿಯಲ್ಲಿರುವ ಪಂಚಲಿಂಗೇಶ್ವರ ಎಂಬ ಐದು ಶಿಖರಗಳ ದೇವಾಲಯವು ಪೂರ್ಣಶಿಥಿಲ ಸ್ಥಿತಿಯಲ್ಲಿತ್ತು. ಈಚೆಗೆ ಈ ದೇಗುಲದ ಜೀರ್ಣೋದ್ಧಾರ ಕಾರ್ಯ ಪ್ರಗತಿಯಲ್ಲಿದೆ.

ಆ ಕಾಲದ ಪ್ರಸಿದ್ಧ ಹೊಯ್ಸಳ ಶಿಲ್ಪಿ ಮಲ್ಲಿತಂಮನ ಹಿರಿತನದಲ್ಲಿ ನಿರ್ಮಾಣಗೊಂಡ ಸೊಗಸಿನ ಗುಡಿ ಕೇಶವ ದೇವಾಲಯ. ನಕ್ಷತ್ರಾಕಾರದ ಜಗತಿಯ ಮೇಲೆ ಮೂರು ಅಡಿ ಎತ್ತರದಲ್ಲಿ ಕಟ್ಟಲಾದ ಈ ದೇವಾಲಯವು ಮೂರು ಗರ್ಭಗುಡಿಗಳನ್ನೂ ಅವಕ್ಕೆ ಒಪ್ಪುವ ಮೂರು ಶಿಖರಗಳನ್ನೂ ಹೊಂದಿದೆ. ಕಾಲವೈಪರೀತ್ಯದ ನಡುವೆಯೂ ಈ ಮೂರೂ ಶಿಖರಗಳು ತಮ್ಮ ಶಿಲ್ಪವೈಭವವನ್ನು ಉಳಿಸಿಕೊಂಡಿವೆ. ಮಧ್ಯದ ಗರ್ಭಗುಡಿಯಲ್ಲಿ ಚೆನ್ನಕೇಶವನಿದ್ದರೆ ನಮ್ಮ ಎಡಭಾಗದ ಎಂದರೆ, ದಕ್ಷಿಣದ ಗುಡಿಯಲ್ಲಿ ಗೋಪಾಲಕೃಷ್ಣ ಹಾಗೂ ಉತ್ತರಭಾಗದಲ್ಲಿ ಜನಾರ್ದನ ಮೂರ್ತಿಗಳು ಹೊಯ್ಸಳ ಶೈಲಿಯ ಸೊಗಸಿನ ಮಾದರಿಗಳಾಗಿವೆ. ಸುತ್ತಲಿನ ದೊಡ್ಡ ಪ್ರಾಕಾರದ ಮಂಟಪಗಳಲ್ಲೂ ವಿಷ್ಣುವಿನ ಇಪ್ಪತ್ನಾಲ್ಕು ರೂಪಗಳೂ ಸೇರಿದಂತೆ ಅರವತ್ನಾಲ್ಕು ದೇವತಾಮೂರ್ತಿಗಳಿದ್ದುವಂತೆ.

ಸೋಮನಾಥಪುರದ ದೇಗುಲದ ಕಟ್ಟಡ ಹದಿನಾರು ಮೂಲೆಗಳ ನಕ್ಷತ್ರಾಕಾರವುಳ್ಳದ್ದು. ಅದೇ ಆಕಾರದ ಜಗಲಿಯ ಮೇಲೆ ಕಟ್ಟಲಾಗಿರುವುದೊಂದು ವಿಶೇಷ. ಜಗಲಿಯ ಮೂಲೆಗಳಲ್ಲಿ ಇರಿಸಿರುವ ಆನೆಗಳು ಇಡೀ ಕಟ್ಟಡವನ್ನು ಹೊತ್ತಂತೆ ಭಾಸವಾಗುವ ಹಾಗೆ ಶಿಲ್ಪಿಯ ಪರಿಕಲ್ಪನೆ. ಹೊರಗೋಡೆಯ ಕೆಳಭಾಗದಲ್ಲಿ ಆರು ಅಡ್ಡಪಟ್ಟಿಕೆಗಳು. ಎಲ್ಲಕ್ಕಿಂತ ಕೆಳಗಿನ ಪಟ್ಟಿಯಲ್ಲಿ ಆನೆಗಳು, ಆಮೇಲೆ ಕುದುರೆಗಳು, ಹೂಬಳ್ಳಿಗಳು, ನಾಲ್ಕನೆಯ ಪಟ್ಟಿಯ ಮೇಲೆ ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಪೌರಾಣಿಕ ಕಥಾಚಿತ್ರಗಳನ್ನು ಚಿತ್ರಿಸಿದೆ. ಇಲ್ಲಿ ದಶರಥನ ಪುತ್ರಕಾಮೇಷ್ಟಿಯಾಗ, ಸೀತಾಕಲ್ಯಾಣ, ಜಟಾಯುವಧೆ, ಭೀಮ-ದುರ್ಯೋಧನರ ಕಲಹ, ಪೂತನಿವಧೆ, ಕೃಷ್ಣನ ಬಾಲಲೀಲೆಗಳು ಮೊದಲಾದ ಕಥಾನಕಗಳ ಕಿರುಚಿತ್ರಗಳು ಸೊಗಸಾಗಿ ಮೂಡಿವೆ. ಮೇಲಿನೆರಡು ಪಟ್ಟಿಗಳ ಮೇಲೆ ಯಾಳಿ ಅಥವಾ ಮಕರಗಳನ್ನೂ ಹಂಸಗಳನ್ನೂ ಕೆತ್ತಲಾಗಿದೆ.



ನಡುಗೋಡೆಯ ಮೇಲೆ ಅನೇಕ ದೇವತಾಮೂರ್ತಿಗಳನ್ನು ನೋಡಬಹುದು. ವಿಷ್ಣುವಿನ ವಿವಿಧ ರೂಪಗಳು, ಸರಸ್ವತಿ, ನಾಟ್ಯಗಣಪತಿ, ನಾಟ್ಯಲಕ್ಷ್ಮಿ, ಹಯಗ್ರೀವ, ಇಂದ್ರನೇ ಮೊದಲಾದ ದೇವತೆಗಳು ಇಲ್ಲಿನ ಶಿಲ್ಪಗಳಲ್ಲಿ ಮೂಡಿದ್ದಾರೆ. ಅನೇಕ ಶಿಲ್ಪಗಳ ಕೆಳಭಾಗದಲ್ಲಿ ಅವನ್ನು ಕೆತ್ತಿದ ಶಿಲ್ಪಿಗಳ ಹೆಸರುಗಳನ್ನೂ ಮೂಡಿಸಿದ್ದಾರೆ. ಮಲ್ಲಿತಂಮ, ಮಸಣಿತಂಮ, ಚಾಮಯ, ಚೌಡಯ, ನಂಜಯ ಮೊದಲಾದ ಶಿಲ್ಪಿಗಳು ಇಲ್ಲಿನ ಶಿಲ್ಪವೈಭವದ ರೂವಾರಿಗಳಾಗಿ ತಮ್ಮ ಹೆಸರು ಉಳಿಸಿಹೋಗಿದ್ದಾರೆ.

ಕಳಶದಿಂದ ಅಲಂಕೃತವಾದ ಮೂರು ಶಿಖರಗಳ ಮೇಲೂ ಹಲವು ದೇವತಾಶಿಲ್ಪಗಳು, ಯಕ್ಷಯಕ್ಷಿಯರ ಕಿರುಪ್ರತಿಮೆಗಳು ಕಂಡುಬರುತ್ತವೆ. ಇವೆಲ್ಲ ಎಂಟುನೂರು ವರ್ಷಗಳ ಗಾಳಿಮಳೆಗಳ ಹವಾವೈಪರೀತ್ಯವನ್ನು ಸಹಿಸಿ ಇಲ್ಲಿಯವರೆಗೂ ಉಳಿದುಬಂದಿರುವುದೇ ಒಂದು ಅಚ್ಚರಿ.

ಗುಡಿಯೊಳಗೆ ಮುಖಮಂಟಪ ಹಾಗೂ ನವರಂಗಗಳು ಭವ್ಯವಾಗಿವೆ. ನವರಂಗದ ಒಳಛಾವಣಿ ಎಂದರೆ ಭುವನೇಶ್ವರಿಯ ಚಿತ್ರವಿನ್ಯಾಸಗಳು ಆಕರ್ಷಕ. ಮಧ್ಯದ ಗರ್ಭಗುಡಿಯಲ್ಲಿ ಇರಿಸಿರುವ ಕೇಶವನ ಶಿಲ್ಪ ಮೂಲದಲ್ಲಿದ್ದ ವಿಗ್ರಹವಲ್ಲವಂತೆ. ಹೇಗಿದ್ದರೂ, ಹೊಯ್ಸಳ ಶೈಲಿಯ ಈ ಪ್ರತಿಮೆಯೂ ಉಳಿದ ಗರ್ಭಗೃಹಗಳಲ್ಲಿರುವ ಕೃಷ್ಣ ಹಾಗೂ ಜನಾರ್ದನರ ವಿಗ್ರಹಗಳೂ ಸೂಕ್ಷ್ಮ ಕುಸುರಿಕೆತ್ತನೆಗಳಿಂದ ಮನಸೆಳೆಯುತ್ತವೆ. ಒಳಗುಡಿಗಳ ಮೂರೂ ಪ್ರವೇಶದ್ವಾರಗಳ ಬಾಗಿಲವಾಡದ ಮೇಲಿನ ಕೆತ್ತನೆಗಳು, ಗಜಲಕ್ಷ್ಮಿ ಮತ್ತಿತರ ದೇವತಾಶಿಲ್ಪಗಳು ಅಂದವಾಗಿವೆ.

ಪುರಾತತ್ತ್ವ ಇಲಾಖೆಯ ರಕ್ಷಣೆಯಲ್ಲಿ ಈ ದೇವಾಲಯವನ್ನೂ ವಿಶಾಲವಾದ ಆವರಣವನ್ನೂ ಸುವ್ಯವಸ್ಥಿತವಾಗಿ ಕಾಪಾಡಿಕೊಂಡು ಬರಲಾಗಿದೆ. ◆

**ಸೌಜನ್ಯ: ಆಕಾಶವಾಣಿ, ಮೈಸೂರು**







## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

### ಅಧ್ಯಾಯ-24

# 'ನಾಡನ್ನಾಳುವ ದೊರೆಯಾಗುವೆ'



ಹತ್ತನೇ ತರಗತಿಯ ಪರೀಕ್ಷೆಗಳು ಸಮೀಪಿಸುತ್ತಿದ್ದಂತೆಯೇ ಅನಂತಕುಮಾರನೂ ಅವನ ಸಹಪಾಠಿಗಳೂ ಪೂರ್ವಭಾವಿ ಅಭ್ಯಾಸಗಳಲ್ಲಿ ತೊಡಗಿಕೊಂಡಿದ್ದರು. ಅನಂತ ತಡರಾತ್ರಿಯವರೆಗೆ ಓದಲು ಅವಕಾಶವಾಗುವಂತೆ ತನ್ನ ಮನೆಯ ಸಮೀಪವಿದ್ದ ಸಹಪಾಠಿ ಸತೀಶನ ಮನೆಗೆ ಬರುವನು. ಅಲ್ಲಿಗೇ ವೇಣುಗೋಪಾಲನೂ ಬರುತ್ತಿದ್ದ. ರಾತ್ರಿ ಬಹುಹೊತ್ತಿನವರೆಗೆ ಇವರ ಅಭ್ಯಾಸ ಸಾಗುವುದು.

ಅಲ್ಲೇ ಸಮೀಪದಲ್ಲಿ ದೇಶಪಾಂಡೆಯವರ ಮನೆ. ಅವರ ಮನೆಯಂಗಳದಲ್ಲಿ ಒಂದು ತೋತಾಪುರಿ ಮಾವಿನ ಮರ. ಮರದ ತುಂಬ ಒಳ್ಳೆಯ ಗಾತ್ರದ ಕಾಯಿಗಳು ಇದ್ದವು. ಆ ಮರವನ್ನು ದೇಶಪಾಂಡೆಯವರು ಬಹು ಜತನದಿಂದ ನೋಡಿಕೊಂಡಿದ್ದರು. ಅವರನ್ನು ತೋತಾಪುರಿ ಮಾಮ ಎಂದೇ ಗುರುತಿಸುವುದೂ ಇತ್ತು. ಕಾಲೊನಿಯ ಮಕ್ಕಳ ಸೈನ್ಯದ ದಾಳಿಯಿಂದ ಅಷ್ಟು ಕಾಯಿಗಳನ್ನು ಅವರು ರಕ್ಷಿಸಿಡುತ್ತಿದ್ದುದೇ ಒಂದು ದೊಡ್ಡ ಸಂಗತಿ. ಒಂದು ಹೀಚೂ ಕಳುವಾಗಬಾರದು, ಅಷ್ಟು ಜೋಪಾನವಾಗಿ ಕಾವಲಿದ್ದು ನೋಡಿಕೊಳ್ಳುತ್ತಿದ್ದರು. ನಡುರಾತ್ರಿಯೂ ಯಾರಾದರೂ ಬಂದಾರೆಂದು ಒಂದು ವ್ಯವಸ್ಥೆ ಮಾಡಿಟ್ಟಿದ್ದರು. ಪಕ್ಕದಲ್ಲೇ ಒಂದು ಮಂಟಪ. ಆ ಮಂಟಪದಲ್ಲಿ ಡ್ರೈವರನೊಬ್ಬ ಬಂದು ಮಲಗುತ್ತಿದ್ದ. ಅವನಿಗೇ ಈ ಮಾವಿನ ಮರವನ್ನು ಕಾಯುವ ಕೆಲಸವನ್ನು ದೇಶಪಾಂಡೆ ವಹಿಸಿಕೊಟ್ಟಿದ್ದರು.

ಕಾಲೊನಿಯಲ್ಲಿ ಅಷ್ಟೊಂದು ಹುಡುಗರಿದ್ದು ಅಲ್ಲೇ ಇರುವ ಮರದಲ್ಲಿ ಒಂದು ಮಾವಿನಕಾಯಿಯನ್ನು ಕದಿಯಲಾಗಲಿಲ್ಲವೆಂದರೆ ಅವಮಾನವಲ್ಲವೇ! ಅನಂತಕುಮಾರನ ಗುಂಪಿನಲ್ಲಿ ಈ ಮಾತು ಚರ್ಚೆಗೆ ಬಂದಿದ್ದುಂಟು. ಈ ರಾತ್ರಿ ವ್ಯಾಸಂಗದ ಅವಧಿಯಲ್ಲಿ ಅದಕ್ಕೊಂದು ಅವಕಾಶ ಕಲ್ಪಿಸಿಕೊಳ್ಳಬಹುದೆಂದು ಮಕ್ಕಳಿಗೆ ತೋರಿತು. ದೇಶಪಾಂಡೆಯವರೇನೋ ಮಲಗಿರುತ್ತಾರೆ. ಈ ಕಾವಲುಗಾರನನ್ನು ನಿವಾರಿಸುವುದು ಹೇಗೆ? ಅನಂತಕುಮಾರನಿಗೆ ಒಂದು ಒಳ್ಳೆಯ ಉಪಾಯ ಹೊಳೆಯಿತು. ಸತೀಶನೂ ಅನಂತನೂ ಕಾವಲಿನವನನ್ನು ನೋಡಿಕೊಳ್ಳುವುದೆಂದೂ ಅಷ್ಟರಲ್ಲಿ ವೇಣು ಮರವೇರಿ ಕಾಯಿಗಳನ್ನು ಕೆಡವಬೇಕೆಂದೂ ತೀರ್ಮಾನವಾಯಿತು.

ಹುಣ್ಣಿಮೆಯ ಬೆಳುದಿಂಗಳು. ಮಂಟಪದ ಕಡೆಗೆ ಎರಡು ಬಿಳಿಯ ಆಕಾರಗಳು ಚಲಿಸತೊಡಗಿದ್ದವು. ಎರಡೂ ಆಕಾರಗಳು ಹೆಚ್ಚುಕಡಿಮೆ ಐದೂಮುಕ್ಕಾಲು ಅಡಿ ಎತ್ತರ ಇವೆ. ಮಂಟಪದಲ್ಲಿ ಮಲಗಿದ್ದ ಕಾವಲುಗಾರನಿಗೆ " ಹೂಮ್ ಹೂಮ್" ಎಂಬ ದೀರ್ಘವಾದ ಹೂಂಕಾರದ ತಗ್ಗಿನ ಸ್ವರ ಕೇಳಿತು. ಸೊಳ್ಳೆಯ ಕಾಟಕ್ಕೆಂದು ಹೊದಿಕೆ ಹೊದ್ದು ಮಲಗಿದವನು ಕಣ್ಣುಬಿಟ್ಟು ನೋಡುತ್ತಾನೆ! ಬಿಳಿಯ ಬಟ್ಟೆ ಕವಿದ ಎತ್ತರದ ಆಕಾರಗಳೆರಡು ತನ್ನೆದುರಿಗೇ ಹೂಂಗುಟ್ಟುತ್ತಿವೆ. ಕಣ್ಣು ಮಾತ್ರವೇ ಕಾಣುವಂತಿದೆ. ಆಕಾರವೂ ಸಹಜವಾಗಿಲ್ಲ. ಕಾವಲುಗಾರ ಹೆದರಿ ನಡುಗಿಬಿಟ್ಟ. ಕಾಲೊನಿಯಲ್ಲಿ ಹುಣಿಸೆಮರಗಳೂ ಇದ್ದವು. ಈ ಬಿಳಿದೆವ್ವಗಳು ಯಾವ ಮರದ ನಿವಾಸಿಗಳೋ ಯೋಚಿಸುವ ವ್ಯವಧಾನವೂ ಇರಲಿಲ್ಲ. ಮುಸುಕೆಳೆದು ಮಲಗಿಬಿಟ್ಟ; ಈಗ ಅವನ ನಡುಕವೂ ಗೊತ್ತಾಗುವ ಹಾಗಿರಲಿಲ್ಲ.

ಅನಂತನೂ ಸತೀಶನೂ ಬಿಳಿಯ ಪಂಚೆಯುಟ್ಟುಕೊಂಡಿದ್ದರು. ಇಬ್ಬರದೂ ಎತ್ತರದ ಆಕಾರ. ಈ ಪಂಚೆಗಳನ್ನು ತೆಗೆದು ಕಾಲಿಂದ ತಲೆಯವರೆಗೆ ಬರುವಂತೆ ಹೊದೆದುಕೊಂಡರು. ಇವರು ತಮ್ಮ ಛದ್ಮವೇಷ ತೋರಿ ಕಾವಲಿನವನನ್ನು ಹೆದರಿಸುತ್ತಿರುವಷ್ಟರಲ್ಲಿ ವೇಣು ಮರವೇರಿ ಒಂದಿಷ್ಟು ಕಾಯಿಗಳನ್ನು ಕಿತ್ತುಕೊಂಡ. ಅಷ್ಟರಲ್ಲಿ ಬಿಳಿಯ ಆಕಾರಗಳು ಮರದ ಅಡಿಗೆ ಬಂದುನಿಂತು ಕೆಳಗೆಸೆದ ಕಾಯಿಗಳನ್ನು ಆತುಕೊಂಡವು. ಹಾಗೂ ಸದ್ದಾಗದೆ ಇರಲಿಲ್ಲ. ದೇಶಪಾಂಡೆಯವರು ಯಾರು ಯಾರು ಎನ್ನುತ್ತ ದೀಪ ಬೆಳಗಿಸಿ ಹೊರಬರುವಷ್ಟರಲ್ಲಿ ಹುಡುಗರು ಅಲ್ಲಿಂದ ಪಲಾಯನ ಮಾಡಿಬಿಟ್ಟಿದ್ದರು. ಕಳ್ಳರು ಯಾರೆಂಬುದು ದೇಶಪಾಂಡೆಯವರಿಗೆ ಗೊತ್ತಾಯಿತೋ ಇಲ್ಲವೋ, ಕಾವಲು ಮಲಗಿದ್ದವನ ವರದಿಯನ್ನಂತೂ ಅವರು ನಂಬಿರಲಿಕ್ಕಿಲ್ಲ. ಪಾಪ, ಆ ಕಾವಲುಗಾರ ಮಾತ್ರ ಮತ್ತೆ ಆ ಮಂಟಪದತ್ತ ಸುಳಿಯಲಿಲ್ಲವೆಂದು ತೋರುತ್ತದೆ.

******

ಇಂತಹ ಕೌಮಾರ್ಯಸಹಜವಾದ ತುಂಟತನ ಚೇಷ್ಟೆಗಳನ್ನು ಹೊರತುಪಡಿಸಿದಂತೆ, ಲ್ಯಾಮಿಂಗ್ಟನ್ ಪ್ರೌಢಶಾಲೆಗೆ ಸೇರುವ ಹೊತ್ತಿಗಾಗಲೇ ಅನಂತಕುಮಾರನ ದೈಹಿಕ ಬೆಳವಣಿಗೆಯೊಡನೆ ವಿಚಾರಶಕ್ತಿಯೂ ಹೆಚ್ಚತೊಡಗಿತ್ತು. ಎಳೆತನದ ತುಂಟತನ ಕಡಿಮೆಯಾಗುತ್ತ ಗಾಂಭೀರ್ಯ ತೋರತೊಡಗಿತ್ತು. ಕೆಂಪಗೆ ದೃಢಕಾಯನಾಗಿ ಕಾಣುತ್ತಿದ್ದ ಅನಂತಕುಮಾರ ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗಿಂತ ಎತ್ತರವಾಗಿದ್ದ. ಐದು ಅಡಿ ಹತ್ತು ಇಂಚಿನ ಹುಡುಗನನ್ನು ಎಲ್ಲಿದ್ದರೂ ಗುರುತಿಸಬಹುದಾಗಿತ್ತು. ಅವನಿಗೆ ಕ್ರಿಕೆಟ್ ಆಟವೆಂದರೆ ಬಲು ಇಷ್ಟ. ಜೊತೆಗೆ ಚೆಸ್ ಆಡುವುದರಲ್ಲೂ ಆಸಕ್ತಿ. ಗ್ರಂಥಭಂಡಾರಕ್ಕೆ ಹೋಗಿ ಪುಸ್ತಕಗಳನ್ನು ಓದುವುದರಲ್ಲಂತೂ ಎಲ್ಲಿಲ್ಲದ ತಲ್ಲೀನತೆ. ಶ್ರೀಮತಿ ಗಾರ್ಗಿ, ಶ್ರೀ ಪುರಂದರೆ ಮೊದಲಾದವರು ಇಲ್ಲಿ ಅನಂತಕುಮಾರನ ಶಿಕ್ಷಕರಾಗಿದ್ದವರು. ಶ್ರೀ ಬಸವರಾಜ ಹೊರಟ್ಟಿಯವರು ಆಗ ಇದೇ ಲ್ಯಾಮಿಂಗ್ಟನ್ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕೆಲಕಾಲ ಕೆಲಸಮಾಡುತ್ತಿದ್ದರು.

ಮಕ್ಬೂಲ್ - ಅನಂತ ಇವರಿಬ್ಬರೂ ಜೊತೆಯಲ್ಲೇ ಬೆಳೆದರೂ ಒಟ್ಟಿಗೇ ಆಟವಾಡುತ್ತಿದ್ದರೂ ಎಂದೂ ಒಟ್ಟಿಗೆ ಕುಳಿತು ಓದಲಿಲ್ಲ. ಆದರೆ, ಓದುವುದು ಎಂದರೆ ಪಠ್ಯಪುಸ್ತಕ ಮಾತ್ರವೆಂದು ಭಾವಿಸಿದ್ದ ಮಕ್ಬೂಲ್ ಪಟೇಲನಿಗೆ ಓದಿನ ವಿಸ್ತಾರವನ್ನು ಮೊದಲಿಗೆ ತೋರಿಸಿಕೊಟ್ಟಿದ್ದು ಅನಂತಕುಮಾರನೇ. ಇವರು ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲ. ಒಂದು ದಿನ ಅನಂತ ಪುಸ್ತಕವೊಂದನ್ನು ತಂದು ಮಕ್ಬೂಲನ ಕೈಗೆ ಕೊಟ್ಟ. ಎಮ್. ಸಿ. ಛಾಗ್ಲಾ ಬರೆದ 'ರೋಸ್ ಇನ್ ಡಿಸೆಂಬರ್' ಎಂಬ ಪುಸ್ತಕ ಅದು. ಅದನ್ನೇನು ಮಾಡಬೇಕೆಂದು ತಿಳಿಯದೆ ಮಕ್ಬೂಲ್ ಪುಟ ಮೊಗುಚುತ್ತಿದ್ದಾಗ ಅನಂತ "ಈ ಪುಸ್ತಕವನ್ನು ನಾನು ಓದಿದ್ದೇನೆ. ನೀನೂ ಇದನ್ನು ಓದಬೇಕು. ಓದಿ ನೋಡು" ಎಂದ.

ಮಕ್ಬೂಲನಿಗೆ ಆಶ್ಚರ್ಯವಾಯಿತು. ಶಾಲೆಗೆ ಸಂಬಂಧಪಡದ ಪುಸ್ತಕವನ್ನು ಅವನು ಓದುವುದಿರಲಿ, ನೋಡಿದ್ದೇ ಅದೇ ಮೊದಲು. ಅನಂತನ ಒತ್ತಾಯಕ್ಕೆ ಆ ಪುಸ್ತಕವನ್ನು ಅವನು ಓದಿದ್ದೂ ಆಯಿತು. ಅನಂತಕುಮಾರ್ ಅಂತಹ ಅನೇಕ ಪುಸ್ತಕಗಳನ್ನು ಓದುವ ಹವ್ಯಾಸವುಳ್ಳವನೆಂಬುದು ಮಕ್ಬೂಲನಿಗೆ ತಿಳಿದದ್ದೂ ಆಗಲೇ. ಅಂದು ಪ್ರಾರಂಭವಾದ ಅವರ ಪುಸ್ತಕಸಂಬಂಧ ಬಹುಕಾಲ ಮುಂದುವರಿಯಿತು. ಮುಂದೆ ಮಕ್ಬೂಲ್ ಪಟೇಲ್ ತಾವು ಅಮೆರಿಕೆಯಿಂದ ಬರುವಾಗ ಅನಂತಕುಮಾರರಿಗೆ ಕೆಲವು ಪುಸ್ತಕಗಳನ್ನು ತಂದುಕೊಡುತ್ತಿದ್ದರು. ಅನಂತಕುಮಾರ್ ಬಿಡುವಿಲ್ಲದ ತಮ್ಮ ಕಾರ್ಯಕ್ರಮಗಳ ನಡುವೆ ಆ ಪುಸ್ತಕಗಳನ್ನು ಓದುವುದಲ್ಲದೆ, ಮಕ್ಬೂಲ್ ಇನ್ನೊಮ್ಮೆ ಭೇಟಿಯಾಗುವಾಗ ಪುಸ್ತಕಗಳ ವಿಷಯವಾಗಿ ಚರ್ಚಿಸುತ್ತಿದ್ದುದೂ ಉಂಟು. ಎಂ.ಟಿ.ಎಸ್ ಕಾಲೊನಿಯಲ್ಲಿ ಹುಡುಗರು ಆಡುತ್ತಿದ್ದಾಗ ತಾನೂ ಬಂದು ಸ್ವಲ್ಪಹೊತ್ತು ಆಡುತ್ತಿದ್ದ. ಅನಂತಕುಮಾರ್ ಆಟ ನಿಲ್ಲಿಸಿ ಮೈದಾನದ ಬದಿಯಲ್ಲಿ ಕುಳಿತುಕೊಳ್ಳುತ್ತಿದ್ದ.

ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ರಾಮಜನ್ಮಭೂಮಿಯಲ್ಲಿ ಅನಂತ ಸಸ್ಯಾಗ್ರಹ



"ಇಂತಹ ಪವಿತ್ರ ಭೂಮಿಗೆ ಗಿಡ ನೆಡಲು ಹೋದಾಗ ಅಲ್ಲಿನ ನೆಲಕ್ಕೆ ಹಾರೆ, ಸಲಿಕೆ, ಗುದ್ದಲಿಗಳನ್ನು ಬಳಸಿ ನೆಲವನ್ನು ಅಗೆಯಲು ಮನಸ್ಸೇ ಬರಲಿಲ್ಲ. ನಮ್ಮ ಕೈಗಳನ್ನು ಬಳಸಿ ಮೃದುವಾಗಿ ನೆಲದಲ್ಲಿ ಗುಂಡಿಗಳನ್ನು ತೆಗೆಯಬೇಕು ಎನ್ನಿಸಿತು" ಎಂದು ಅದಮ್ಯ ಚೇತನದ ಪ್ರತಿನಿಧಿಯಾಗಿ ಅಯೋಧ್ಯೆಗೆ ಹೋಗಿದ್ದ ಶ್ರೀ ಪೂರ್ಣಪ್ರಜ್ಞ ಭಾವುಕರಾಗಿ ನುಡಿಯುತ್ತಾರೆ. ಇದು ಸಹಜವೇ, ಏಕೆಂದರೆ, ಮಹರ್ಷಿ ವಾಲ್ಮೀಕಿಯು ಈ ನೆಲವನ್ನು 'ಶ್ರೀಮತೀ' ಪಟ್ಟಣ ಅಥವಾ ಲಕ್ಷ್ಮಿಯ ಆವಾಸಸ್ಥಾನ ಎಂದು ಕರೆದಿದ್ದಾನೆ. "ಬತ್ತ ಮತ್ತು ಕಬ್ಬು ಅಯೋಧ್ಯೆಯ ಪ್ರಮುಖ ಬೆಳೆಗಳಾಗಿದ್ದವು. ಎಲ್ಲಿ ನೋಡಿದರೂ ಬತ್ತದ ಪೈರು ಮತ್ತು ಕಬ್ಬಿನ ಗದ್ದೆಗಳೂ ಕಾಣುತ್ತಿದ್ದವು. ನೀರು ಸಹ ಕಬ್ಬಿನ ಹಾಲಿನಂತೆ ಸಿಹಿಯಾಗಿ ಸದಾ ಸಮೃದ್ಧವಾಗಿತ್ತು. ರಾಜಧಾನಿಯಲ್ಲಿ ಯಾವ ವಸ್ತುವಿಗೂ ಕೊರತೆ ಎನ್ನುವುದೇ ಇರಲಿಲ್ಲ. ದವಸ ಧಾನ್ಯಗಳೆಲ್ಲವೂ ಯಥೇಚ್ಛವಾಗಿ ಬೆಳೆಯುವುದರಿಂದಾಗಿ ಆಹಾರಕ್ಕೆ ಕೊರತೆಯೇ ಇರಲಿಲ್ಲ. ಸಿರಿಸಂಪತ್ತು ಕೋಸಲದ ಸೀಮೆಯುದ್ದಕ್ಕೂ ಹಾಸಿ ಹರಡಿತ್ತು" ಎಂದು ವಾಲ್ಮೀಕಿ ವರ್ಣಿಸಿದ್ದಾನೆ.

ಈ ಅಯೋಧ್ಯೆಯು ತಾನಾಗಿಯೇ ಬೆಳೆದು ನಿಂತ ನಗರವಲ್ಲ. ದ್ವಾರಕೆಯನ್ನು ಮಯನು ನಿರ್ಮಿಸಿರುವಂತೆ ಅಯೋಧ್ಯೆಯನ್ನು ಮನುವು ಯೋಜನಾ ಬದ್ಧವಾಗಿ ನಿರ್ಮಿಸಿದ್ದನು. ಇದು ಸುವಿಭಕ್ತವಾದ, ವಿಶಾಲವಾದ ರಾಜಮಾರ್ಗದಿಂದ ಶೋಭಿತವಾಗಿತ್ತು. ಈ ನಗರದಲ್ಲಿ ಉದ್ಯಾನಗಳು, ದೊಡ್ಡದೊಡ್ಡ ಮಾವಿನ ತೋಪುಗಳು ಇದ್ದವು. ನಗರದ ಸುತ್ತಲೂ ಸಾಲವೃಕ್ಷಗಳ ಆವರಣವಿತ್ತು. ಅಗಲವಾದ ರಸ್ತೆಗಳ ಇಕ್ಕೆಲಗಳಲ್ಲಿ ಬೆಳೆದು ನಿಂತ ಸಾಲುಮರಗಳು ನೆರಳನ್ನು ನೀಡುತ್ತಿದ್ದವು, ಮರದಿಂದ ಉದುರಿದ ಹೂಗಳ ಸುಗಂಧ ತಿರುಗಾಡುವವರಿಗೆ ಆಹ್ಲಾದ ನೀಡುತ್ತಿತ್ತು. ಮಾರ್ಗವನ್ನು ನಿಯಮಿತವಾಗಿ ನಗರ ರಕ್ಷಕರು ಸ್ವಚ್ಛವಾಗಿ ಇರಿಸುತ್ತಿದ್ದರು. ಮಾವು, ಹಲಸು, ಫಲ, ಪುಷ್ಪಗಳಿಂದ ಕೂಡಿದ ಉದ್ಯಾನಗಳಿಂದ ಕೇಳಿಬರುತ್ತಿದ್ದ ಕೋಗಿಲೆಗಳ ಇಂಪಾದ ಸ್ವರವು ಸಂಗೀತಗಾರರ ಹಾಡಿಗೆ ಸಂವಾದಿಯಾಗಿತ್ತು ಎಂದು ವರ್ಣಿಸಿದ ವಾಲ್ಮೀಕಿಯು ಇದನ್ನು "ಪ್ರಭೂತ ಧನಧಾನ್ಯವಾನ್" ಎಂದು ಕರೆದಿದ್ದಾನೆ.

ಇಂತಹ ಅಯೋಧ್ಯೆಯ ರಸ್ತೆಗಳು ಇಂದು ವೈಶಾಲ್ಯವನ್ನು ಕಳೆದುಕೊಂಡು ಕಿರಿದಾಗಿವೆ. ಇವುಗಳನ್ನು ಅಭಿವೃದ್ಧಿ ಪಡಿಸುವ ನೆಪದಲ್ಲಿ ಇಲ್ಲಿನ ಮರಗಳನ್ನು ಕಡಿಯಲಾಗುತ್ತಿದೆ. ನಗರದಿಂದ ಆರೇಳು ಕಿಲೋಮೀಟರ್ ದೂರವಿರುವ ಗುಪ್ತಾರ್ ಘಾಟ್ ಹಸುರಾಗಿದ್ದರೂ ಇಲ್ಲಿಯೂ ಹೇಳಿಕೊಳ್ಳುವಂಥ ದೊಡ್ಡ ಗಾತ್ರದ ಮರಗಳನ್ನು ನಾವು ವರ್ತಮಾನದಲ್ಲಿ ನೋಡಲಾರೆವು. ರಾಮಾಯಣದಲ್ಲಿ ವರ್ಣಿತವಾಗಿರುವ ಅಯೋಧ್ಯೆಯ ರೀತಿಯಲ್ಲಿಯೇ ಇಂದಿನ ನಗರದ ಪುನರ್ನಿರ್ಮಾಣವೂ ನಡೆಯಬೇಕಾಗಿರುವುದು ಅತ್ಯಗತ್ಯವೂ ಸಮಂಜಸವೂ ಆಗಿದೆ.

ಇಂತಹ ಪವಿತ್ರ ಗುಪ್ತಾರ್ ಘಾಟಿನಲ್ಲಿ ಜೂನ್ ೫ರಂದು ಅದಮ್ಯ ಚೇತನದ ವತಿಯಿಂದ ಅಯೋಧ್ಯಾ ವನವಿಭಾಗ ಮತ್ತು ಸುಮಾರು ೨೦ ಜನ ಸ್ಥಳೀಯರ ಸಹಯೋಗದೊಡನೆ ವಿವಿಧ ತಳಿಗಳ ನೂರು ಗಿಡಗಳನ್ನು ನೆಡಲಾಯಿತು. ಇದರ ಮುಂದುವರಿಕೆಯಾಗಿ ಅದಮ್ಯ ಚೇತನ ಸಂಸ್ಥೆಯು ಅನಂತಕುಮಾರರ ಜನ್ಮದಿನವಾದ ಜುಲೈ ೨೨ರಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರರ ನೇತೃತ್ವದಲ್ಲಿ ಮುನ್ನೂರು ಗಿಡಗಳನ್ನು ನೆಡುವ ಸಂಕಲ್ಪವನ್ನು ತೆಗೆದುಕೊಂಡಿದೆ. ರಾಮಾಯಣದಲ್ಲಿ ಚಿತ್ರಿತವಾದ ಆದರ್ಶನಗರದ ಸ್ವರೂಪದಲ್ಲಿ ವರ್ತಮಾನದ ಅಯೋಧ್ಯೆಯು ಮೈದುಂಬಿ ಕಂಗೊಳಿಸಲಿ ಎಂಬುದೇ ನಮ್ಮೆಲ್ಲರ ಆಶಯ. ◆

ಪುಟ 1 ರಿಂದ

## "ಸಾಮಾಜಿಕ ಸೇವೆಯೂ ಒಂದು ಪ್ರಮುಖ ಕ್ಷೇತ್ರ"

ತಂತ್ರಜ್ಞಾನ ಸಂಸ್ಥೆಯ (ಐಐಐಎಸ್ಟಿ) ಆಡಳಿತ ಮಂಡಳಿ ಅಧ್ಯಕ್ಷರೂ ಆಗಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಮ್ಮ ಘಟಿಕೋತ್ಸವ ಭಾಷಣದಲ್ಲಿ "ವಿದ್ಯಾಭ್ಯಾಸದಲ್ಲ ಸಂಪಾದಿಸಿದ ಜ್ಞಾನ-ಕೌಶಲಗಳನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸಬೇಕು. ಪರಿಶ್ರಮ, ಸಮಗ್ರತೆ ಮತ್ತು ಸೇವೆಯ ಮೌಲ್ಯಗಳನ್ನು ನವ ಪದವೀಧರರೆಲ್ಲರೂ ಬೆಳೆಸಿಕೊಳ್ಳಬೇಕು. ಯುವತಿಯರು ಮತ್ತು ಮಹಿಳೆಯರು ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಸಾಧನೆಯತ್ತ ಮುನ್ನುಗ್ಗಬೇಕು" ಎಂದು ಕರೆಯಿತ್ತರು.

ಸಂಪಾದಿಸಿದ ಜ್ಞಾನ-ಕೌಶಲಗಳು ವ್ಯಕ್ತಿಗತವಾದರೂ ಅವು ಆರೋಗ್ಯಕಾರಿ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಬೇಕು. ಹೊಸ ಹೊಸ ತಂತ್ರಜ್ಞಾನದ ವೇಗದೊಂದಿಗೆ ಸಾಗಬೇಕಾದ ಅನಿವಾರ್ಯತೆ ಇದೆ. ಆದರೆ, ನಮ್ಮ ಸಂಸ್ಕೃತಿ-ಪರಂಪರೆಯ ಬೆಳಕಿನಲ್ಲಿ ಸಾಗುವುದೂ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪಿಡಿಎ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವೀಧರರಾದವರ ಪೈಕಿ ಶೇ. ೫೦ರಷ್ಟು ವಿದ್ಯಾರ್ಥಿನಿಯರಿರುವುದನ್ನು ಗುರುತಿಸಿದ ತೇಜಸ್ವಿನಿಯವರು, "ಆದರೆ, ಈ ವಿದ್ಯಾರ್ಥಿನಿಯರಲ್ಲಿ ಎಂಜಿನಿಯರಿಂಗ್ ವೃತ್ತಿಯಲ್ಲಿ ಮುಂದುವರಿಯುವವರ ಸಂಖ್ಯೆ ಶೇ.೧೫ ಕ್ಕಿಂತ ಕಡಿಮೆ. ಹೆಣ್ಣು ಮಕ್ಕಳಿಗೆ ಮದುವೆ ಸಂಸಾರ ಇತ್ಯಾದಿ ನೈಸರ್ಗಿಕ ವಿರಾಮದ ಹಲವು ಅಡೆತಡೆಗಳು ಬರುತ್ತವೆ, ನಿಜ. ಇಂತಹ ಅಡೆತಡೆಗಳ ಸಂದರ್ಭದಲ್ಲಿ ಅವರು ತಮ್ಮಲ್ಲಿನ ಕೌಶಲ್ಯ ಕಳೆದುಕೊಳ್ಳಬಾರದು. ಇಂತಹ ಸಂಗತಿಗಳನ್ನು ಧನಾತ್ಮಕವಾಗಿ ಸ್ವೀಕರಿಸಿದರೆ ಬದುಕಿಗೆ ಉತ್ತಮ ಮುನ್ನುಡಿ ಬರೆದಂತೆ. ಆದ್ದರಿಂದ, ಮಹಿಳೆಯರು ತಮ್ಮಲ್ಲಿರುವ ಕೌಶಲ್ಯಗಳನ್ನು ಗುರುತಿಸಿಕೊಂಡು, ಅವುಗಳ ವಿಕಾಸದತ್ತ ಗಮನ ಹರಿಸಬೇಕು."

"ಸಾಮಾಜಿಕ ಸೇವೆ ಒಂದು ಪ್ರಮುಖ ಕ್ಷೇತ್ರ ಎಂಬುದನ್ನು ಮರೆಯಬಾರದು." ಎಂಬುದು ತೇಜಸ್ವಿನಿಯವರು ಯುವಜನತೆಗೆ ಹೇಳಿದ ಮಹತ್ತ್ವದ ಕಿವಿಮಾತು. ಎಂಜಿನಿಯರಿಂಗ್ ಪದವಿ ಪೂರ್ಣಗೊಂಡ ಮೇಲೆ ಕಾರ್ಪೋರೇಟ್ ವಲಯದಲ್ಲಿಯೇ ದುಡಿಯಬೇಕು ಎಂಬ ಭಾವನೆ ಬೇಡ. ಜಗತ್ತು ದೊಡ್ಡದಿದೆ. ಉದ್ಯಮ ಕ್ಷೇತ್ರದಲ್ಲಿ ವೈವಿಧ್ಯಮಯ ವಲಯಗಳಿವೆ. ಸಮಾಜ ಸೇವೆ, ಕಲಾ ಮಾಧ್ಯಮ, ಬೋಧನೆ ಸೇರಿದಂತೆ ಇತರ ಕ್ಷೇತ್ರಗಳಲ್ಲಿಯೂ ಮಹಿಳೆಯರು ತಮ್ಮ ಛಾಪು ಮೂಡಿಸಲು ಮುಂದಾಗಬೇಕು.

ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ಕಾಯ್ದುಕೊಳ್ಳಲು ಜಾಗಿಂಗ್, ಯೋಗ, ಧ್ಯಾನ ಮಾಡಿ. ಜೊತೆಗೆ, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವುದರಿಂದ ಮನೋವಿಕಾಸಕ್ಕೂ ಪೂರಕವಾಗುತ್ತವೆ- ಎಂದು ಅವರು ಕರೆನೀಡಿದರು.

ದೇಶೀಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸ್ಥಳೀಯ ಬೆಳೆಗಳಿಗೂ ಉತ್ತೇಜನ ನೀಡುವುದು ನಮ್ಮ ಕರ್ತವ್ಯವೆಂಬುದು ತೇಜಸ್ವಿನಿಯವರು ಹೇಳಿದ ಇನ್ನೊಂದು ಮುಖ್ಯ ವಿಷಯ. ಕಲಬುರಗಿ ಭಾಗದ ಪ್ರಮುಖ ಬೆಳೆ ತೊಗರಿ. ತೊಗರಿ ಬೇಳೆಗೆ ಬೇಡಿಕೆ ಇದೆ. ಪೌಷ್ಟಿಕಾಂಶವುಳ್ಳ ನಮ್ಮ ನೆಲದ ಬೆಳೆಗಳನ್ನು ಪ್ರೋತ್ಸಾಹಿಸುವುದು ನಮ್ಮದೇ ಕರ್ತವ್ಯ.

ಪರಿಸರಸಂರಕ್ಷಣೆಯ ದೃಷ್ಟಿಯಿಂದ ಪ್ರತಿಯೊಬ್ಬರೂ ಗಮನಿಸಿ ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳಿರುತ್ತವೆಯೆಂದು ಅವರು ಯುವಜನತೆಯ ಗಮನಸೆಳೆಯುವ ಕೆಲವು ಅಂಶಗಳನ್ನು ಪ್ರಸ್ತಾಪಿಸಿದರು.

"ಜೀವನದಲ್ಲಿ ನಡೆಯುವ ಸಣ್ಣ ಸಣ್ಣ ಸಂಗತಿಗಳು ಸಮಾಜದ ಬಹುದೊಡ್ಡ ಬದಲಾವಣೆಗೆ ಮುನ್ನುಡಿ ಬರೆಯುತ್ತವೆ. ಹಾಲು ಮತ್ತು ಮೊಸರಿನ ಪ್ಲಾಸ್ಟಿಕ್ ಪ್ಯಾಕೆಟ್ ಕತ್ತರಿಸುವಾಗ ಅದರ ತುದಿ ಬೇರೆಯಾಗದಂತೆ ಕತ್ತರಿಸಿ. ಇದರಿಂದ ನಿತ್ಯ ಸಾವಿರಾರು ಕೆ.ಜಿ. ಸಣ್ಣ ಪ್ಲಾಸ್ಟಿಕ್ ತುಂಡು ಪರಿಸರದಲ್ಲಿ ಸೇರುವುದು ನಿಲ್ಲುತ್ತದೆ. ಇಂತಹ ಸಣ್ಣ ಸಣ್ಣ ಸಂಗತಿಗಳು ಸಹ ಪರಿಸರ ಸಂರಕ್ಷಣೆಯಲ್ಲಿ ಬಹು ಮುಖ್ಯ ಪಾತ್ರವಹಿಸುತ್ತವೆ.

ಒಂದು ಮರವು ವಾರ್ಷಿಕವಾಗಿ 100 ಕೆ.ಜಿ. ಆಮ್ಲಜನಕ ಉತ್ಪಾದಿಸುತ್ತದೆ. ಆದರೆ, ಒಬ್ಬ ವ್ಯಕ್ತಿಗೆ 700 ಕೆ.ಜಿ. ಆಮ್ಲಜನಕ ಬೇಕು. ಅಂದರೆ, ಒಬ್ಬ ವ್ಯಕ್ತಿಗೆ 7 ಮರಗಳಿರಬೇಕಿತ್ತು. ಆದರೆ, ಬೆಂಗಳೂರಿನಂತಹ ನಗರಗಳಲ್ಲಿ ಈಗ ಒಬ್ಬ ವ್ಯಕ್ತಿಗೆ ಒಂದು ಮರ ಮಾತ್ರ ಉಳಿದುಕೊಂಡಿದೆ. ಆದ್ದರಿಂದ ಹಸಿರು ಬೆಳೆಸುವ ಕಡೆ ಎಲ್ಲರೂ ಯೋಚಿಸಬೇಕು." ಎಂಬ ಮಹತ್ತ್ವದ ಜವಾಬ್ದಾರಿಯ ಕಡೆಗೆ ಶ್ರೀಮತಿ ತೇಜಸ್ವಿನಿಯವರು ತಮ್ಮ ಭಾಷಣದ ಮೂಲಕ ಎಲ್ಲರ ಗಮನಸೆಳೆದರು. ◆

## ನಾನು ಕಂಡಂತೆ



## ಅನಂತಕುಮಾರ್

# ಗುರುವನ್ನು ಮೀರಿಸಿದ ಶಿಷ್ಯ



**ಅಶೋಕ ಕುಮಾರ ರಾ. ರಾಯ್ಕರ್**
ಅ.ಭಾ.ಸಾ.ಪ. ಬಳ್ಳಾರಿ ವಿಭಾಗ
ಸಂಯೋಜಕರು ಹಾಗೂ ಮಾಜಿ ಸದಸ್ಯರು,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸುಮಾರು 45 ವರ್ಷಗಳ ಹಿಂದಿನ ವಿಷಯ. ನಾನು ಹಾಗೂ ಅನಂತಕುಮಾರ್ ಹುಬ್ಬಳ್ಳಿಯ ಪ್ರತಿಷ್ಠಿತ ಪಿ. ಸಿ. ಜಬೀನ್ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜೊತೆಯಾಗಿ ಪದವಿಪೂರ್ವ ತರಗತಿಯಲ್ಲಿ ಓದುತ್ತಿದ್ದೆವು. ಸಹಪಾಠಿಯಾಗಿದ್ದರಿಂದ ಅನಂತಕುಮಾರನನ್ನು ಭೇಟಿಮಾಡಲು ಆಗಾಗ್ಗೆ ಅವರ ಮನೆಗೆ ಹೋಗುವುದು ರೂಢಿಯಾಗಿತ್ತು. ಒಂದು ದಿನ ಬೆಳ್ಳಂಬೆಳಗ್ಗೆ ಹಳೆ ಹುಬ್ಬಳ್ಳಿಯ ಎಂ ಟಿ ಎಸ್ ಕಾಲೋನಿಯಲ್ಲಿರುವ ಅವರ ರೈಲ್ವೆ ಕ್ವಾರ್ಟರ್ಸ್ ಮನೆಗೆ ಅನಂತನನ್ನು ನೋಡಲು ಕಾತುರದಿಂದ ಹೋಗಿದ್ದೆ. ಮಾತೋಶ್ರೀ ಗಿರಿಜಕ್ಕನವರು ಹೊಸ್ತಿಲಿಗೆ ರಂಗೋಲಿ, ನೀರು, ಕುಂಕುಮ ಹಾಕಿ ಪೂಜೆಗೈಯುತ್ತಿದ್ದರು. ಸಾಧಾರಣವಾಗಿ ಎಲ್ಲರ ಮನೆಯಲ್ಲಿ ದೇವರ ಫೋಟೋ ಇರುತ್ತದೆ. ಅನಂತನ ಮನೆಯವರು ತೆಲುಗು ಭಾಷಿಕರಾಗಿರುವುದರಿಂದ ತಿರುಪತಿ ತಿಮ್ಮಪ್ಪ ದೇವರ ಫೋಟೋ ಇರಬೇಕಾಗಿತ್ತು ಎಂದು ನನ್ನ ಎಣಿಕೆ. ದೇವರ ಚಿತ್ರದ ಬದಲಿಗೆ ಎರಡು ಸಿಂಹಗಳ ಫೋಟೋ ನೋಡಿ ನನಗೆ ಆಶ್ಚರ್ಯವಾಯಿತು. ಅನಂತಕುಮಾರನ ತಾಯಿಯವರಿಗೆ "ಅಮ್ಮ, ಎಲ್ಲರ ಮನೆಯಲ್ಲಿ ದೇವರ ಫೋಟೋ ಇರುತ್ತದೆ. ಆದರೆ ನೀವು ನಿಮ್ಮ ಮನೆಯ ಮುಖ್ಯಬಾಗಿಲ ಮೇಲೆ ಪ್ರಾಣಿಗಳಾದ ಸಿಂಹಗಳ ಫೋಟೋ ಹಾಕಿದ್ದೀರಲ್ಲ" ಎಂದು ಕೇಳಿದೆ. ಅದಕ್ಕೆ ಅವರು "ದೇವರು ನನ್ನ ಮನಸ್ಸಿನ ಒಳಗಿದ್ದಾನೆ, ಮುಖ್ಯಬಾಗಿಲಿಗೆ ಎರಡು ಸಿಂಹಗಳ ಫೋಟೋ ಇವೆ. ನನ್ನ ಇಬ್ಬರು ಮಕ್ಕಳೂ ದೇಶಕ್ಕಾಗಿ ಸಿಂಹಗಳಂತೆ ಬೆಳೆಯಬೇಕೆಂದು ನನ್ನ ಅಭಿಲಾಷೆ" ಎಂದು ಅವರು ಹೇಳಿದ್ದರು. ಅದಕ್ಕೆ ನಾನು, "ಅನಂತಕುಮಾರ ಸಿಂಹದ ಹಾಗೆಯೇ ಇದ್ದಾನೆ" ಎಂದು ಹೇಳಿದ್ದೆ.

ನಾನು ಹಾಗೆ ಹೇಳಲು ಪ್ರಬಲಕಾರಣವೂ ಇದ್ದಿತು. ಧಾರವಾಡದ ವಿಶ್ವವಿದ್ಯಾಲಯದ ಕರ್ನಾಟಕ ಕಾಲೇಜು ಕ್ಯಾಂಪಸ್ ನಲ್ಲಿ ವಾರ್ಷಿಕ ಸ್ನೇಹಕೂಟದ ಸಮಯದಲ್ಲಿ ಅನಾಚಾರ, ದೌರ್ಜನ್ಯಗಳು ನಡೆದ ವರದಿಯಾಗಿತ್ತು. ಈ ಸಂಬಂಧ ಆಗಿನ ಮುಖ್ಯಮಂತ್ರಿ ಗುಂಡೂರಾವ್ ರವರಿಗೆ ಮನವಿಪತ್ರ ಕೊಡಲಿಕ್ಕೆ ಹೋಗಿದ್ದೆವು. ಮುಖ್ಯಮಂತ್ರಿಗಳ ದರ್ಶನಕ್ಕಾಗಿ ಆಗ ಈಗ ಎಂದು ನಿರೀಕ್ಷಿಸಿ ಸಾಕಾಯಿತು. ನಾಲ್ಕು-ಐದು ತಾಸು ತಾಳ್ಮೆಯಿಂದ ಸಹಿಸಿಕೊಂಡು ಕಾದು ಕುಳಿತಿದ್ದೆವು. ಕೊನೆಗೊಮ್ಮೆ ಎಸ್ ಪಿ ಸಾಹೇಬರು ಬಂದು "ಈ ದಿನ ಸಾಹೇಬ್ರ ಭೇಟಿ ಸಾಧ್ಯವಿಲ್ಲ ನಾಳೆ ಬನ್ನಿ" ಎಂದು ಹೇಳಿಬಿಟ್ಟರು. ಅದನ್ನು ಕೇಳಿಸಿಕೊಂಡ ಅನಂತಕುಮಾರ್ ಅತಿಯಾದ ಕೋಪದಿಂದ, "ಇಂದೇ ಭೇಟಿ ಮಾಡಿಸಿ, ನಾಳೆ ಬರುವುದಾದ್ರೆ ಕಲ್ಲು ಹಿಡಿದುಕೊಂಡು ಬರಬೇಕಾಗುತ್ತದೆ" ಎಂದು ಗರ್ಜಿಸಿದ. ಕೂಡಲೇ ಎಸ್ ಪಿ ಸಾಹೇಬರು ಒಳಗೆ ಹೋಗಿ ಮುಖ್ಯಮಂತ್ರಿಯವರ ಅಪ್ಪಣೆ ಪಡೆದು ನಮಗೆ ಭೇಟಿಗೆ ಅವಕಾಶವಿತ್ತರು. ನಾವು ಒಳಹೋಗಿ ಮುಖ್ಯಮಂತ್ರಿಯವರನ್ನು ಭೇಟಿಯಾದೆವು. ಮನವಿ ಪತ್ರ ಕೊಟ್ಟು ಹೇಳಬೇಕಾದುದನ್ನು ಹೇಳಿ ಹೊರಗೆ ಬಂದೆವು. ಆಮೇಲೆ ನಾನು ಅನಂತಕುಮಾರನಿಗೆ "ಕಲ್ಲು ಹಿಡಕೊಂಡು ಬರತೀವಿ ಅಂದೆಯಲ್ಲ, ನಾವಿರುವುದೇ ಇಬ್ಬರು, ಯಾವ ಧೈರ್ಯದ ಮೇಲೆ ಐಬಿ ಕಟ್ಟಡದ ಗಾಜುಗಳಿಗೆ ಕಲ್ಲು ಹೊಡೆಯುತ್ತೀಯಾ?" ಎಂದು ಕೇಳಿದೆ. ಅದಕ್ಕೆ ಅವನು, "ಕಲ್ಲು ಹೊಡೆಯುವ ವಿಷಯ ಇರಲಿ, ಅಷ್ಟು ಉಪಾಯ ಮಾಡಿ ಹೇಳಿದ್ದಕ್ಕೆ ನಮ್ಮ ಕೆಲಸವಾಯಿತಲ್ಲ, ನಡೆ ಹೋಗೋಣ" ಎಂದಿದ್ದ.

ಒಮ್ಮೆ ಅನಂತಕುಮಾರನ ತಾಯಿ ಗಿರಿಜಾ ಶಾಸ್ತ್ರಿಯವರೊಡನೆ ಮಾತನಾಡುತ್ತ "ನಮ್ಮ ಅನಂತಕುಮಾರನಿಗೆ ಪ್ರಧಾನಿಯಾಗುವಷ್ಟು ಯೋಗ್ಯತೆ ಇದೆ; ಅದು ಹೇಗೆ ಅನಂತ ಅಷ್ಟು ಜ್ಞಾನವಂತ ಹಾಗೂ ಬುದ್ಧಿವಂತನಾದ?" ಎಂದು ಅವರನ್ನು ಕೇಳಿದ್ದೆ. ಅದಕ್ಕೆ ಗಿರಿಜಕ್ಕನವರು, "ಯಾರಿಗೆ ಗೊತ್ತಪ್ಪ? ರಾತ್ರಿ ಎರಡು, ಮೂರು ಗಂಟೆಯಾದರೂ ಕುರಾನ್, ಬೈಬಲ್, ಮನಃಶಾಸ್ತ್ರ, ತರ್ಕಶಾಸ್ತ್ರ ಹಾಗೂ ಭಗವದ್ಗೀತೆ ಅಂತ ಅನೇಕ ಪುಸ್ತಕಗಳನ್ನು ಓದುತ್ತಿರುತ್ತಾನೆ, ಬೇಗನೆ ಮಲಗುವುದಿಲ್ಲ" ಎಂದು ಹೇಳಿದ್ದರು.

ನಾವು ಹುಬ್ಬಳ್ಳಿಯ ಕಾಲೇಜಿನಲ್ಲಿ ಓದುತ್ತಿದ್ದ ಕಾಲ. ಆಗ ನಮಗೆ ಇಂಗ್ಲೀಷ್ ಉಪನ್ಯಾಸಕರಾಗಿದ್ದವರು ಗೋಣಿ ಮಾಸ್ತರರೆಂದು ಖ್ಯಾತರಾದ ಮಹನೀಯರು. ನಾವು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾಗ ಗೋಣಿ ಮಾಸ್ತರರು ವಿದ್ಯಾರ್ಥಿ ಪರಿಷತ್ತಿನ ಹುಬ್ಬಳ್ಳಿ ಘಟಕಕ್ಕೆ ಉಪಾಧ್ಯಕ್ಷರೂ ಆಗಿದ್ದರು. ಅವರನ್ನು ಬೈಠಕ್ಕಿಗೆ ಆಹ್ವಾನಿಸುವ ಹೊಣೆ ನನ್ನ ಪಾಲಿಗೆ ಬಂದಿತು. ಅವರಲ್ಲಿಗೆ ಹೋದಾಗ ಅವರು ಬೈಠಕ್ಕಿಗೆ ಯಾರು ಯಾರು ಬರುತ್ತಾರೆಂದು ಕೇಳಿದರು. ನಾನು ಆಹ್ವಾನಿತರ ಹೆಸರುಗಳನ್ನು ಅವರ ಮುಂದೆ ಪ್ರಸ್ತಾಪ ಮಾಡಿದೆ. ಅದಕ್ಕೆ, ಗೋಣಿ ಮಾಸ್ತರರು "ನನಗೆ ಯಾರು ಬರುವುದೂ ಬೇಕಾಗಿಲ್ಲ, ಕೇವಲ ಅನಂತಕುಮಾರ ಒಬ್ಬನೇ ಇದ್ದರೆ ಸಾಕು, ಅವನು ಬರುತ್ತಾನೆಯೇ?" ಎಂದು ಕೇಳಿದರು. ಅದಕ್ಕೆ ನಾನು, "ಅನಂತಕುಮಾರ ಬರುತ್ತಾನೆ ಸಾರ್, ಆದರೆ ಅವನೊಬ್ಬನೇ ಬಂದರೆ ಸಾಕೆಂದು ಏಕೆ ಹೇಳಿದಿರಿ?" ಎಂದು ಕೇಳಿದೆ. ಅದಕ್ಕೆ ಅವರು, "ಅನಂತಕುಮಾರ್ ನನ್ನ ಶಿಷ್ಯನಲ್ಲ, ಅವನು ನನಗೆ ಗುರು. I will bow down my head to his feet" ಎಂದು ಹೇಳಿದಾಗ ನನ್ನ ತಲೆ ಒಮ್ಮೆ ಸುತ್ತಿದಂತೆ ಆಯಿತು. ಏಕೆಂದರೆ, ಇಂಗ್ಲೀಷ್ ಸಾಹಿತ್ಯದಲ್ಲಿ ಗೋಣಿ ಮಾಸ್ತರರು ಪಿಎಚ್‌ಡಿ ಮಾಡಿದವರು. ಅನಂತಕುಮಾರ ಅವರ ಶಿಷ್ಯ ಹಾಗೂ ಆಗಿನ್ನೂ ಬಿಎ ಮೊದಲ ವರ್ಷದ ವಿದ್ಯಾರ್ಥಿ. ತಮ್ಮ ಕಿರಿಯ ಶಿಷ್ಯನ ಬಗ್ಗೆ ಗೋಣಿ ಮಾಸ್ತರರು ಅಷ್ಟೊಂದು ಅಭಿಮಾನದಿಂದ ಮಾತನಾಡಿದುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಆದರೆ, ಅನಂತಕುಮಾರ್ ಅಂತಹ ಪ್ರಚಂಡ ವಿದ್ವತ್ತಿನ ವ್ಯಕ್ತಿಯಾಗಿದ್ದ ಎನ್ನುವುದೂ ಅಷ್ಟೇ ನಿಜ!

ತಮ್ಮ ಮುತ್ತಜ್ಜನವರಾದ ದಿವಂಗತ ಬಿ. ಸೂರ್ಯನಾರಾಯಣ ರಾವ್ ಅವರು ಬರೆದಿದ್ದ, "ಮರೆಯಲಾಗದ ಸಾಮ್ರಾಜ್ಯ - ವಿಜಯನಗರ" ಎಂಬ ಹಂಪಿಯ ಕುರಿತಾದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಅತಿಥಿಗಳಾಗಿ ಆಗ ಕೇಂದ್ರ ಮಂತ್ರಿಗಳಾಗಿದ್ದ ಅನಂತಕುಮಾರ್ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಅನಂತಕುಮಾರರ ವಿಚಾರಪ್ರದ ಉಪನ್ಯಾಸವನ್ನು ಕೇಳಿದ ಸನ್ಮಾನ್ಯ ಉಪಕುಲಪತಿ, ಡಾ. ಎಂ. ಎಂ. ಕಲ್ಬುರ್ಗಿಯವರು ಮಾತನಾಡುತ್ತ "ಅನಂತಕುಮಾರರು ಈ ಸಮಾರಂಭಕ್ಕೆ ಅತಿಥಿಯಾಗಿ ಬಂದಿಲ್ಲ, ನಮಗೆ ಗುರುಗಳಾಗಿ ಬಂದಿದ್ದಾರೆ" ಎಂದು ಪ್ರಶಂಸೆಯ ಮಾತುಗಳನ್ನು ಆಡಿದ್ದರು. ವಿರೋಧಿ ಎಂದೇ ಹೇಳಬಹುದಾದ ವಿಭಿನ್ನ ವಿಚಾರಧಾರೆಯವರಾದ ಶ್ರೀ ಕಲ್ಬುರ್ಗಿಯವರಿಂದಲೂ ಮುಕ್ತ ಪ್ರಶಂಸೆಯನ್ನು ಪಡೆದ ಅದ್ಭುತ, ಅನನ್ಯ, ಪ್ರಖರ ಜ್ಞಾನಿ ಅನಂತನಿಗೆ ಅನಂತ ವಂದನೆಗಳು. ◆

# 'ನಾಡನ್ನಾಳುವ ದೊರೆಯಾಗುವೆ'

ಪುಟ 3 ರಿಂದ ಉಳಿದವರೂ ಅವನೊಡನೆ ಬಂದು ಕುಳಿತುಕೊಳ್ಳುತ್ತಿದ್ದರು. ಅನಂತಕುಮಾರ ಏನೋ ಹೊಸ ವಿಷಯ ಹೇಳುವನೆಂದು ಅವರಿಗೆ ಕುತೂಹಲ. ತಾನು ಇತ್ತೀಚೆಗೆ ಓದಿದ ಪುಸ್ತಕದಿಂದ ಸ್ವಾರಸ್ಯಕರವಾದ ವಿಷಯಗಳನ್ನು ಆಯ್ದು ಅನಂತ ಜೊತೆಯ ಮಕ್ಕಳಿಗೆ ವಿವರಿಸಿ ಹೇಳುತ್ತಿದ್ದ, ನೆಪೋಲಿಯನ್ ಬೋನಾಪಾರ್ಟೆಯೋ ಹಿಟ್ಲರನೋ ಅಂದಿನ ವಿಷಯವಾಗಬಹುದು. ಬೀಚಿಯವರ ನಗೆಹನಿಗಳೂ ಇರಬಹುದು. ಬಹು ಸ್ವಾರಸ್ಯಕರವಾಗಿ ನಗುಮುಖದಿಂದ ಅನಂತ ವರ್ಣಿಸುತ್ತಿದ್ದರೆ ಉಳಿದ ಹುಡುಗರೆಲ್ಲ ಆಸಕ್ತಿಯಿಂದ ಆಲಿಸುತ್ತಿದ್ದರು.

ಮೊದಲು ಮಕ್ಕಳ ತುಂಟಾಟದ ನಾಯಕನೆಂದು ಅನಂತಕುಮಾರನನ್ನು ಟೀಕಿಸುತ್ತಿದ್ದ ಉಳಿದ ತಾಯ್ತಂದೆಯರಿಗೆ ಈಗ ಅನಂತ ಮಾದರಿ ವಿದ್ಯಾರ್ಥಿಯಾಗಿ ಕಾಣತೊಡಗಿದ್ದ. ಯಾವಾಗಲೂ ಆಟ, ತಿರುಗಾಟದಲ್ಲೇ ತೊಡಗಿರುತ್ತಿದ್ದ ಮಕ್ಕಳನ್ನು ಉದ್ದೇಶಿಸಿ ತಾಯಂದಿರು, "ನಿಮಗೆಲ್ಲ ಏನು ಕಾಲಿನಲ್ಲಿ ನಾಯಿಗೆರೆ ಇದೆಯೇನು? ಹೋಗಿ ಅನಂತಕುಮಾರನನ್ನು ನೋಡಿ ಬನ್ನಿ. ಎಷ್ಟು ಪುಸ್ತಕ ಓದುತ್ತಾನೆ, ಅವನನ್ನು ನೋಡಿ ಕಲಿಯಬಾರದಾ?" ಎನ್ನುವುದಿತ್ತು. ಅನಂತಕುಮಾರ್ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದ ಕಾಲ. ತರಗತಿಯ ಒಂದು ಅವಧಿಯಲ್ಲಿ, ಶಿಕ್ಷಕರು ಮಕ್ಕಳನ್ನೆಲ್ಲ ಕೇಳಿದರು: "ನೀವು ಮುಂದೆ ಏನಾಗಬಯಸುತ್ತೀರಿ?" ವಿದ್ಯಾರ್ಥಿಗಳಲ್ಲಿ ಕೆಲವರು ಡಾಕ್ಟರ್ ಆಗಬಯಸುವುದಾಗಿ ಹೇಳಿದರು. ಇನ್ನು ಕೆಲವರು, ಇಂಜಿನಿಯರ್ ಆಗುತ್ತೇನೆಂದೋ ಲಾಯರ್ ಆಗುತ್ತೇನೆಂದೋ ಹೇಳಿದರು. ಅನಂತಕುಮಾರನ ಸರದಿ ಬಂದಾಗ ಅವನು ಹೇಳಿದ: "ನಾನು ಎತ್ತರ ಎತ್ತರಕ್ಕೆ ಏರುತ್ತ ದೊಡ್ಡ ವ್ಯಕ್ತಿಯಾಗುತ್ತೇನೆ, ನಾಡನ್ನು ಆಳುತ್ತೇನೆ!"

ಬಹುಶಃ ವಿದ್ಯಾರ್ಥಿಯೊಬ್ಬನ ಬಾಯಿಂದ ಇಂತಹ ಮಹತ್ತಾದ ಧ್ಯೇಯವನ್ನು ಯಾವ ಶಿಕ್ಷಕರೂ ಎಲ್ಲಿಯೂ ಕೇಳಿರಲಿಕ್ಕಿಲ್ಲ! ಒಂದು ವೇಳೆ, ತಾತ ನರಹರಿ ಶಾಸ್ತ್ರಿಗಳು ಬದುಕಿದ್ದು ಮೊಮ್ಮಗನ ಬಾಯಿಂದ ಈ ಮಾತುಗಳನ್ನು ಕೇಳಿದ್ದರೆ, ಅದು ಚಕ್ರವರ್ತಿ ಯೋಗದ ಮೊದಲ ಹೆಜ್ಜೆ ಎಂದುಕೊಳ್ಳುತ್ತಿದ್ದರೋ ಏನೋ! (ಮುಂದುವರೆಯುವುದು) ◆

# ಸಾರ್ಥಕ ಬದುಕಿನ ಯಶಸ್ವೀ ವ್ಯಕ್ತಿ : ಶ್ರೀ ಏಕನಾಥ ರಾನಡೆ

ವ್ಯಕ್ತಿ ವಿಶೇಷ ಮಾಲಿಕೆ

- ಕೆ. ಜನಾರ್ದನ ತುಂಗ

"ಶ್ರೀ ಏಕನಾಥ ರಾನಡೆಯವರು ಜನರನ್ನು ಒಂದುಗೂಡಿಸುವ ವ್ಯಕ್ತಿತ್ವವುಳ್ಳವರು. ಅವರು ವಿವೇಕಾನಂದ ಶಿಲಾಸ್ಮಾರಕದ ನಿರ್ಮಾಣಕ್ಕಾಗಿ ರಾಜಕೀಯವಾಗಿ ವಿಭಿನ್ನ ವಿಚಾರಧಾರೆಯ ಜನರ ಸಹಕಾರವನ್ನು ಪಡೆದುಕೊಳ್ಳಲು ಯಶಸ್ವಿಯಾಗಿದ್ದರು. 'ಜನ್‌ಭಾಗೀದಾರಿ' ಅಥವಾ ಜನರ ಪಾಲುದಾರಿಕೆಯನ್ನು ಪ್ರತಿಪಾದಿಸುತ್ತಿದ್ದ ಅವರು ಸ್ಮಾರಕದ ನಿರ್ಮಾಣಕ್ಕೆ ಜನಸಾಮಾನ್ಯರಿಂದ ಒಂದು ರೂಪಾಯಿಯಿಂದ ಐದು ರೂಪಾಯಿಯವರೆಗೆ ದೇಣಿಗೆಯನ್ನು ಸಂಗ್ರಹಿಸಿ ಪ್ರತಿಯೊಬ್ಬರಿಗೂ ವಿವೇಕಾನಂದ ಶಿಲಾ ಸ್ಮಾರಕದ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿರುವ ಸಾರ್ಥಕ ಭಾವವನ್ನು ದೊರಕಿಸಿಕೊಟ್ಟರು." ಈ ರೀತಿಯಾಗಿ ಶ್ರೀ ರಾನಡೆಯವರನ್ನು ಸ್ಮರಿಸಿಕೊಂಡವರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು. ರಾನಡೆಯವರ ಇದೇ ಪರಿಕಲ್ಪನೆಯನ್ನು ಸರ್ದಾರ್ ಸರೋವರದ ದಂಡೆಯ ಮೇಲೆ ಸರ್ದಾರ್ ವಲ್ಲಭ ಭಾಯಿ ಪಟೇಲರ ಪ್ರತಿಮೆಯನ್ನು ಸ್ಥಾಪಿಸುವಾಗಲೂ ಮೋದಿಯವರು ಬಳಸಿಕೊಂಡಿದ್ದರು. ಮೋದಿಯವರೂ ಸೇರಿದಂತೆ ಅನೇಕ ಯಶಸ್ವೀ ವ್ಯಕ್ತಿಗಳಿಗೆ ಪ್ರೇರಣಾ ಶಕ್ತಿಯಾಗಿ ಸಾರ್ಥಕ ಬದುಕನ್ನು ಸಾಗಿಸಿದ ಶ್ರೀ ಏಕನಾಥ ರಾನಡೆಯವರು ಪ್ರಾತಃಸ್ಮರಣೀಯರ ಸಾಲಿನಲ್ಲಿ ಎದ್ದು ಕಾಣಿಸುತ್ತಾರೆ.



ರಾನಡೆಯವರು ವಿವೇಕಾನಂದರ ಪ್ರಭಾವಕ್ಕೆ ಒಳಗಾದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ. ಕ್ರೈಸ್ತ ಧರ್ಮಪ್ರಚಾರಕರು ಹಿಂದೂ ಧರ್ಮದ ಬಗ್ಗೆ ನಡೆಸುತ್ತಿದ್ದ ಅಪಪ್ರಚಾರವನ್ನು ಎದುರಿಸಲು ಅವರು ಯುವಕನಾಗಿದ್ದಾಗಲೇ ಉಪನಿಷತ್ತುಗಳ ಅಧ್ಯಯನವನ್ನು ಪ್ರಾರಂಭಿಸಿದರು. ಉಪನಿಷತ್ತುಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದೆನ್ನಿಸಿದಾಗ ಅವುಗಳ ಕುರಿತು ಸ್ವಾಮಿ ವಿವೇಕಾನಂದರ ಬರವಣಿಗೆಗಳನ್ನು ಓದಲಾರಂಭಿಸಿದರು. ತನ್ಮೂಲಕ ಅವರು ವಿವೇಕಾನಂದರ ಜೀವನ, ಬರಹ ಮತ್ತು ದರ್ಶನಗಳಿಂದ ಪ್ರಭಾವಿತರಾದರು. ವಿವೇಕಾನಂದರ ಬಗ್ಗೆ ರಾನಡೆಯವರಿಗಿದ್ದ ಜ್ಞಾನ ಮತ್ತು ಶ್ರದ್ಧೆಗಳನ್ನು ಗಮನಿಸಿದ ಗೋಳ್ವಲ್ಕರ್ ಗುರೂಜಿಯವರು ವಿವೇಕಾನಂದ ಶಿಲಾ ಸ್ಮಾರಕದ ನಿರ್ಮಾಣದ ಕಾರ್ಯವನ್ನು ರಾನಡೆಯವರಿಗೆ ವಹಿಸಿದರು. ೧೯೬೩ರಲ್ಲಿ ವಿವೇಕಾನಂದ ಶಿಲಾಸ್ಮಾರಕ ಸಮಿತಿಯ ಸಂಘಟನಾ ಕಾರ್ಯದರ್ಶಿಯಾಗಿ ರಾನಡೆಯವರು ನಿಯುಕ್ತರಾದರು. ೨೨/೦೮/೧೯೮೨ರಲ್ಲಿ ನಿಧನರಾಗುವವರೆಗೂ ಅವರು ತಮಗೆ ವಿಧಿಸಿದ ಐತಿಹಾಸಿಕ ಕಾರ್ಯದಲ್ಲಿ ಮಗ್ನರಾಗಿ ದೇಶವಿದೇಶಗಳಿಂದ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುವ ತಾಣದ ಇಂದಿನ ಸ್ವರೂಪಕ್ಕೆ ಕಾರಣರಾದರು.

ಶಿಲಾಸ್ಮಾರಕದ ನಿರ್ಮಾಣಕಾರ್ಯದ ಹಾದಿ ಅಷ್ಟೇನೂ ಪ್ರಶಸ್ತವಾಗಿರಲಿಲ್ಲ. ವಿವೇಕಾನಂದರು ವಿದೇಶಕ್ಕೆ ಪ್ರಯಾಣಿಸುವ ಮುನ್ನ ಧ್ಯಾನಸ್ಥರಾಗಿದ್ದ ಬಂಡೆಯ ಮೇಲೆ ಒಂದು ಸ್ಮಾರಕವನ್ನು ನಿರ್ಮಿಸುವ ಉದ್ದೇಶವನ್ನು, ೧೯೬೩ರಲ್ಲಿ ನಡೆದ ವಿವೇಕಾನಂದರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಸ್ಮಾರಕ ನಿರ್ಮಾಣ ಸಮಿತಿಯು ಬಹಿರಂಗಪಡಿಸಿದ ಕೂಡಲೇ ಕ್ರೈಸ್ತಧರ್ಮೀಯರಿಂದ ಆಕ್ಷೇಪ ವ್ಯಕ್ತವಾಯಿತು. ೪೦೦ ವರ್ಷಗಳ ಹಿಂದೆ ಸಂತ ಕ್ಸೇವಿಯರ್ ಅಲ್ಲಿಗೆ ಭೇಟಿ ನೀಡಿದ್ದರಿಂದ ಅದು ಕ್ರೈಸ್ತರಿಗೆ ಸೇರಿದ ಜಾಗ ಎಂಬುದು ಅವರ ತಕರಾರು! ಅಷ್ಟಕ್ಕೇ ನಿಲ್ಲದೆ ಅವರು ಆ ಬಂಡೆಯ ಮೇಲೆ ಒಂದು ಬೃಹತ್ ಗಾತ್ರದ ಶಿಲುಬೆಯನ್ನೂ ನೆಟ್ಟರು. ಸಮಿತಿಯ ಸದಸ್ಯರಿಗಾಗಲಿ, ಪ್ರವಾಸಿಗರಿಗಾಗಲಿ ಬಂಡೆಯನ್ನು ತಲುಪಲು ತೆಪ್ಪಗಳನ್ನು ಒದಗಿಸಲು ಕ್ರೈಸ್ತ ಮೀನುಗಾರರು ನಿರಾಕರಿಸಿದರು. ಹಿಂದೂ ಮತ್ತು ಕ್ರೈಸ್ತರ ನಡುವಣ ವಿವಾದ ಪ್ರತಿಭಟನೆಯ ರೂಪ ತಾಳಿದಾಗ ಸರಕಾರವು ವಿವೇಕಾನಂದ ಶಿಲೆಯ ಆಸುಪಾಸಿನಲ್ಲಿ ನಿಷೇಧಾಜ್ಞೆಯನ್ನೂ ಜಾರಿ ಮಾಡಿತು. ಇದು ಯಾವುದನ್ನೂ ಲೆಕ್ಕಿಸದ ಸಮಿತಿಯು ವಿವೇಕಾನಂದರು ಧ್ಯಾನ ಮಾಡಿದ ಶಿಲೆಯ ಮೇಲೆಯೇ ಅವರ ಪ್ರತಿಮೆಯನ್ನು ಸ್ಥಾಪಿಸುವ ನಿರ್ಧಾರವನ್ನು ತೆಗೆದುಕೊಂಡು ಒಂದು ಫಲಕವನ್ನು ಹಾಕಿತು. ಸಮಿತಿಯ ಪ್ರಯತ್ನಗಳಿಗೆ ಒತ್ತಾಸೆಯಾಗಿ ಸ್ವಾಮಿ ಚಿನ್ಮಯಾನಂದರು ಹತ್ತುಸಾವಿರ ರೂಪಾಯಿಗಳ ದೇಣಿಗೆಯನ್ನೂ ನೀಡಿದರು.

ಕಾಲಾಂತರದಲ್ಲಿ ವಿವೇಕಾನಂದ ಶಿಲೆಯು ಹಿಂದೂಗಳಿಗೆ ಸೇರಿದ್ದು ಎಂಬುದನ್ನು ಮೂಲ ಭೂದಾಖಲೆಗಳ ಆಧಾರದ ಮೇಲೆ ಸಾಬೀತುಪಡಿಸಿದ ಮೇಲೆ ಶಿಲಾಸ್ಮಾರಕದ ಕೆಲಸ ಪ್ರಾರಂಭವಾಯಿತು. ದೇಶದ ಅನೇಕ ರಾಜ್ಯಸರಕಾರಗಳ, ಉದ್ಯಮಿಗಳ, ಜನಸಾಮಾನ್ಯರ ದೇಣಿಗೆಯ ಮೂಲಕ ಎಲ್ಲ ಸಂಸತ್ಸದಸ್ಯರ ಬೆಂಬಲವನ್ನು ಪಡೆದು ನಿರ್ಮಿತವಾದ ಭವ್ಯವಾದ ವಿವೇಕಾನಂದ ಶಿಲಾಸ್ಮಾರಕವನ್ನು ದಿನಾಂಕ ೦೨/೦೯/೧೯೭೦ರಂದು ಅಂದಿನ ರಾಷ್ಟ್ರಪತಿಗಳಾದ ಶ್ರೀ ವಿ. ವಿ. ಗಿರಿಯವರು ಉದ್ಘಾಟಿಸಿದರು. ಪ್ರಾರಂಭದಲ್ಲಿ ಅಸಾಧ್ಯ ಎಂಬಂತಿದ್ದ ಕೆಲಸವನ್ನು ಏಕನಾಥ ರಾನಡೆಯವರು ತಮ್ಮ ಕರ್ತೃತ್ವದಿಂದ ಸಾಧ್ಯವಾಗಿಸಿದರು. ಈ ನಿಟ್ಟಿನಲ್ಲಿ ಅವರು ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯರ ಆಶೀರ್ವಾದವನ್ನೂ ಕಲಕತ್ತೆಯ ರಾಮಕೃಷ್ಣ ಮಿಶನ್ ಸಹಕಾರವನ್ನೂ ಎಲ್ಲ ಸಾಧುಸಂತರ ಬೆಂಬಲವನ್ನೂ ಗಳಿಸಲು ಯಶಸ್ವಿಯಾದರು. ಕಾಂಗ್ರೆಸ್, ಕಮ್ಯೂನಿಸ್ಟ್, ಡಿಎಂಕೆ, ಜನಸಂಘ ಮುಂತಾದ ಪರಸ್ಪರ ವಿರೋಧಿ ವಿಚಾರಧಾರೆಗಳ ಪಕ್ಷಗಳನ್ನೂ ಈ ಕಾರ್ಯಕ್ಕೆ ಸಹಕರಿಸುವಂತೆ ಮನವೊಲಿಸಿದ್ದರು. ಈ ಅವಧಿಯಲ್ಲಿ ಸುಮಾರು ೨೫೦೦೦ ಪತ್ರಗಳನ್ನು ಅವರು ಬರೆದಿದ್ದರು ಎಂಬುದು ಅವರ ಕೆಲಸದ ಅಗಾಧತೆಯನ್ನು ಸಾಕ್ಷೀಕರಿಸುತ್ತದೆ. ಪರಿಣಾಮವಾಗಿ, ರಾನಡೆಯವರ ಈ ಕಾರ್ಯವು "ಒಂದು ಜೀವನ; ಒಂದು ಗುರಿ" ಎಂಬ ಹೊಸ ನಾಣ್ನುಡಿಯನ್ನು ಹುಟ್ಟುಹಾಕಿತು.

ಸ್ಮಾರಕ ನಿರ್ಮಾಣ ಪೂರ್ಣಗೊಂಡ ಮೇಲೆ, ೧೯೭೨ರಲ್ಲಿ ಅವರು ಕನ್ಯಾಕುಮಾರಿಯಲ್ಲಿ ವಿವೇಕಾನಂದ ಕೇಂದ್ರದ ಸ್ಥಾಪನೆ ಮಾಡಿದರು. "ಜನಸಾಮಾನ್ಯರ ಅಸಾಮಾನ್ಯ ಸಂಸ್ಥೆ" ಎಂದು ಹೆಸರಾಗಿರುವ ಇದು ವಿವೇಕಾನಂದರಿಗೆ ಸಜೀವ ಸ್ಮಾರಕದಂತಿದ್ದು ವ್ಯಕ್ತಿ ನಿರ್ಮಾಣ ಮತ್ತು ದೇಶ ನಿರ್ಮಾಣ ಎಂಬ ಅವಳಿ ಉದ್ದೇಶದಿಂದ ಸ್ಥಾಪಿತವಾಗಿದೆ. ಮಾನವ ಸೇವೆಯೇ ಈಶ ಸೇವೆ ಎಂಬ ಧ್ಯೇಯ ವಾಕ್ಯದೊಂದಿಗೆ ಸ್ಥಾಪಿತವಾದ ಈ ಸಂಸ್ಥೆಯು ಇಂದು ೨೬ ರಾಜ್ಯಗಳಲ್ಲಿ ೧೩೩೨ ಶಾಖೆಗಳನ್ನು ಹೊಂದಿರುವ ಬೃಹತ್‌ಸಂಸ್ಥೆಯಾಗಿ ಬೆಳೆದು ನಿಂತಿದೆ. ಈ ಕೇಂದ್ರಗಳು ಯೋಗ ವರ್ಗ, ಸ್ವಾಧ್ಯಾಯ ವರ್ಗ, ಸಂಸ್ಕಾರ ವರ್ಗ, ಕೇಂದ್ರ ವರ್ಗ ಮುಂತಾದ ತರಬೇತಿ ಕಾರ್ಯಕ್ರಮಗಳ ಮೂಲಕ ಯುವಕರ ಮತ್ತು ಮಹಿಳೆಯರ ಸಂಘಟನೆ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಪ್ರಾಕೃತಿಕ ಸಂಪನ್ಮೂಲಗಳ ಅಭಿವೃದ್ಧಿ ಮುಂತಾದ ಕೆಲಸಗಳಲ್ಲಿ ನಿರತವಾಗಿದೆ. ಕೇಂದ್ರದ ಮೂಲಕ ಯುವಭಾರತಿ ಮತ್ತು ಕೇಂದ್ರಭಾರತಿ ಎಂಬ ಎರಡು ನಿಯತಕಾಲಿಕಗಳನ್ನೂ ರಾನಡೆಯವರು ಪ್ರಕಟಿಸಲು ಪ್ರಾರಂಭಿಸಿದ್ದರು.

ಏಕನಾಥ ರಾನಡೆಯವರು ಹುಟ್ಟಿದ್ದು ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಟಿಮ್‌ಟಾಳಾ ಎಂಬ ಪುಟ್ಟ ಊರಿನಲ್ಲಿ, ೧೯೧೪ರ ನವೆಂಬರ್೧೯ರಂದು. ಅವರ ತಂದೆಯ ಹೆಸರು, ಶ್ರೀ ರಾಮಕೃಷ್ಣರಾವ್ ವಿನಾಯಕ ರಾನಡೆ, ತಾಯಿ, ಶ್ರೀಮತಿ ರಮಾಬಾಯಿ. ಎಂಎ, ಎಲ್‌ಎಲ್‌ಬಿಯ ವರೆಗೆ ವಿದ್ಯಾಭ್ಯಾಸ – ನಾಗಪುರದಲ್ಲಿ.

ಏಕನಾಥ ರಾನಡೆಯವರು ೧೯೩೮ರಲ್ಲಿ ಆರೆಸ್ಸೆಸ್ ಸಂಸ್ಥೆಯ ಪೂರ್ಣಕಾಲಿಕ ಪ್ರಚಾರಕರಾಗಿ ಮಹಾಕೋಸಲ ಪ್ರಾಂತಕ್ಕೆ ತೆರಳಿದರು. ನಂತರ ಪೂರ್ವಾಂಚಲದ (ಈಶಾನ್ಯ ಭಾರತ) ಪ್ರಾಂತ ಪ್ರಚಾರಕರಾಗಿ ಕೆಲಸಮಾಡಿದರು. ೧೯೫೦ರಲ್ಲಿ ದೇಶವಿಭಜನೆಯ ಕಾಲದಲ್ಲಿ ಪೂರ್ವಪಾಕಿಸ್ತಾನದಿಂದ ವಲಸೆ ಬಂದ ನಿರಾಶ್ರಿತರ ಸಹಾಯಕ್ಕಾಗಿ 'ವಸ್ತುಹರ ಸಹಾಯತಾ ಸಮಿತಿ' ಎಂಬ ಸಂಸ್ಥೆಯನ್ನು ಕಲ್ಕತ್ತದಲ್ಲಿ ಪ್ರಾರಂಭಿಸಿದರು. ೧೯೫೩ರಲ್ಲಿ ಅಖಿಲ ಭಾರತೀಯ ಪ್ರಚಾರ ಪ್ರಮುಖರಾಗಿ ನಿಯುಕ್ತರಾದ ಅವರು ೧೯೫೬ರಿಂದ ಸರಕಾರ್ಯವಾಹ ಪದವಿಯಲ್ಲಿ ಕಾರ್ಯನಿರ್ವಹಿಸಿದರು. ೧೯೬೨ರಲ್ಲಿ ಅಖಿಲ ಭಾರತೀಯ ಬೌದ್ಧಿಕ್ ಪ್ರಮುಖ್ ಆಗಿ ಆಯ್ಕೆಯಾದರು.

೨೨/೦೯/೧೯೮೨ರಂದು ತೀವ್ರ ಹೃದಯಾಘಾತಕ್ಕೆ ಬಲಿಯಾದ ರಾನಡೆಯವರ ಪಾರ್ಥಿವ ಶರೀರವನ್ನು ಅಗ್ನಿಯು ದಹಿಸುತ್ತಿರುವಂತೆ ವಿವೇಕಾನಂದ ಶಿಲಾಸ್ಮಾರಕದಲ್ಲಿ ಹಾರುತ್ತಿದ್ದ ಓಂ ಧ್ವಜವನ್ನು ಕೆಳಗಿಳಿಸಲಾಗಿತ್ತು. ರಾನಡೆಯವರ ಜೀವನವನ್ನು ಆಧರಿಸಿ One life – One mission ಎಂಬ ಸಾಕ್ಷ್ಯಚಿತ್ರ ನಿರ್ಮಾಣವಾಗಿದೆ. Swami Vivekananda's Rousing Call to Hindu Nation, The Sadhana of Service , The Story of Vivekananda Rock Memorial ಮತ್ತು The Kendra Unfolds ಮುಂತಾದ ಪುಸ್ತಕಗಳನ್ನು ರಾನಡೆಯವರು ಪ್ರಕಟಿಸಿದ್ದಾರೆ.

"ಒಂದು ಜನಪದ ಅಥವಾ ಜನಸಮೂಹ ರಾಷ್ಟ್ರವಾಗುವುದಿಲ್ಲ. ಅದೇ ರೀತಿ, ಒಂದು ಭೌಗೋಳಿಕ ಪ್ರದೇಶದ ಅಥವಾ ಕಾಲಘಟ್ಟದ ಸಮಾಜವನ್ನೂ ರಾಷ್ಟ್ರ ಎಂದು ಪರಿಗಣಿಸಲು ಸಾಧ್ಯವಿಲ್ಲ. ಈ ಆಧಾರಗಳ ಮೇಲೆ ರಚಿತವಾಗಿರುವ ಸರಕಾರವನ್ನು ರಾಜ್ಯ ಎಂದು ಕರೆಯಬಹುದೇ ವಿನಃ ಅದು ರಾಷ್ಟ್ರವಾಗುವುದಿಲ್ಲ. ಸಮಾನ ಆದರ್ಶ ಅಥವಾ ಗುರಿಯು ಒಂದು ರಾಷ್ಟ್ರದ ನಿರ್ಮಾಣಕ್ಕೆ ಕಾರಣವಾಗುತ್ತದೆ. ರಾಷ್ಟ್ರದ ಎಲ್ಲ ಘಟಕಗಳೂ ಒಂದು ಪವಿತ್ರವಾದ ಗುರಿಯನ್ನು ಸಾಧಿಸಲು ಒಗ್ಗಟ್ಟಿನಿಂದ ಕೆಲಸ ಮಾಡುತ್ತವೆ. ಆಧ್ಯಾತ್ಮಿಕ ನೆಲೆಯ ಸೇವೆಯಿಂದ ರಾಷ್ಟ್ರನಿರ್ಮಾಣದಲ್ಲಿ ಸಹಜವಾಗಿ ತೊಡಗಿಕೊಳ್ಳುವ ವ್ಯಕ್ತಿತ್ವದ ನಿರ್ಮಾಣವಾಗುತ್ತದೆ." - ಇದು ಏಕನಾಥ ರಾನಡೆಯವರ ಸಂದೇಶವಾಣಿ. ◆

# ಅಫಘಾನಿಸ್ತಾನದ ಹಿಂದೂಗಳ ನೆರವಿಗೆ ಅನಂತಕುಮಾರ್

2024 ಜನವರಿ 22 ರಂದು ನನ್ನ ಪಾಲಿಗೆ ಚಿರಸ್ಮರಣೀಯ ದಿನ. ಅಂದು ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ಸಮಾರಂಭಗಳಲ್ಲಿ ಭಾಗವಹಿಸುವ ಸುವರ್ಣಾವಕಾಶ ನನಗೆ ದೊರಕಿತ್ತು. ಆ ಶುಭ ಸಮಾರಂಭದ ಸಡಗರದ ನಡುವೆಯೂ ನನಗೆ ಕೆಲವು ಹಳೆಯ ನೆನಪುಗಳು ಮರುಕಳಿಸಿದವು. 500 ವರ್ಷಗಳ ಹಿಂದೆ ಶ್ರೀರಾಮನ ದೇವಾಲಯವನ್ನು ಕೆಡವಿ ಮಸೀದಿ ನಿರ್ಮಿಸಿದ ಬಾಬರನ ಬಗ್ಗೆ ಚರಿತ್ರೆಯಲ್ಲಿ ಸಾಕಷ್ಟು ಓದಿದ್ದೇವೆ. ಆದರೆ, ಅವನ ನಿಜಬಣ್ಣವನ್ನು ಯಾವ ಇತಿಹಾಸಕಾರನೂ ಹೊರಗೆಡವದಿದ್ದುದು ಆಶ್ಚರ್ಯವೇ ಸರಿ.

ನಾನು 2003ರಲ್ಲಿ "ಗ್ಲೋಬಲ್ ಪಾರ್ಟನರ್‌ಶಿಪ್ ಡಿಸೆಬಿಲಿಟಿ ಆಂಡ್ ಡೆವಲಪ್ ಮೆಂಟ್" ಎಂಬ ವಿಶ್ವ ಬ್ಯಾಂಕಿನ ಟ್ರಸ್ಟ್ ಫಂಡ್ ಸಂಸ್ಥೆಯ ಚೇರ್‌ಪರ್ಸನ್ ಆಗಿದ್ದೆ. ಯು.ಎನ್. ಪ್ಲಾಜಾದಲ್ಲಿ ಈ ಸಂಸ್ಥೆಯ ಒಂದು ಸಭೆ ನಡೆಯುತ್ತಿದ್ದಾಗ ಯೋಗಾಯೋಗವೆಂಬಂತೆ ಅಫ್ಘಾನಿಸ್ತಾನದ ಒಬ್ಬ ಯುವಕ ನನ್ನನ್ನು ಭೇಟಿಯಾಗಿದ್ದ. ಬಾಬರನ ಹೆಸರನ್ನು 'ಬಾಬೂರ್' ಎಂದು ಉಚ್ಚರಿಸುತ್ತಾರೆ ಎಂದು ಅವನು ಹೇಳಿದಾಗ ನನಗೆ ಅಚ್ಚರಿಯಾಯಿತು. ಅಷ್ಟೇ ಅಲ್ಲ, "ನಾನು ಅದೇ ಬಾಬೂರನ ದೇಶದಿಂದಲೇ ಬಂದಿರುವೆ. ನಾನು ಬಾಬೂರ್ ಬಗ್ಗೆ ಪಿಎಚ್‌ಡಿ ಮಾಡಿದ್ದೇನೆ" ಎಂದೂ ಆತ ಹೇಳಿದ. ಆ ಯುವ ಸಂಶೋಧಕ ವಿವರಿಸಿದಂತೆ, ಬಾಬರ್ ಒಬ್ಬ ರೈತನ 14 ಮಕ್ಕಳಲ್ಲಿ 13ನೇಯವನು. ತನ್ನ ಊರಿನಲ್ಲಿ ಕಬ್ಬು ಬೆಳೆಯಬೇಕೆಂಬ ಆಸೆಯಿಂದ ಅದರ ಬಗ್ಗೆ ಅಧ್ಯಯನ ಮಾಡಲು ಅವನು ಭಾರತಕ್ಕೆ ಬಂದಿದ್ದ. ಕಬ್ಬು ಬೆಳೆಯುವುದನ್ನು ಉತ್ತರಪ್ರದೇಶದಲ್ಲಿ ಕಲಿತುಕೊಂಡು, ವಾಪಸ್ ತನ್ನ ದೇಶಕ್ಕೆ ಹೋದ. ಆದರೆ ತನ್ನ ಊರಿನಲ್ಲಿ ಕಬ್ಬು ಬೆಳೆಸಲಾಗದೆ ಮರಳಿ ಉತ್ತರಪ್ರದೇಶಕ್ಕೆ ಬಂದು ಸ್ವಲ್ಪ ಜಮೀನು ಖರೀದಿಸಿ ಅಲ್ಲಿ ಕಬ್ಬು ಬೆಳೆಯಲು ಶುರು ಮಾಡುತ್ತಾನೆ. ಈ ರೀತಿಯಾಗಿ ಭಾರತಕ್ಕೆ ಕಾಲೂರಿದ ಬಾಬರ್ "ಮೊಘಲ್" ಸಾಮ್ರಾಜ್ಯವನ್ನೇ ಸ್ಥಾಪಿಸುವ ಮಟ್ಟಕ್ಕೆ ಬೆಳೆದನೆಂದು ಆತ ವಿವರಿಸಿದ.

ಅದೇ ಬಾಬರನು ತನ್ನ ಬಾಬರ್ ನಾಮಾದಲ್ಲಿ ಭಾರತವನ್ನು ಕಾಫಿರ್ ದೇಶವೆಂದು ತಿರಸ್ಕಾರದಿಂದ ದೂಷಿಸಿದ. "ಈ ಕಾಫಿರ್ ದೇಶದಲ್ಲಿ ಯಾವತ್ತೂ ನನ್ನ ಸಮಾಧಿ ಮಾಡಬೇಡಿ" ಎಂದು ಅವನು ಬರೆದುಕೊಂಡಿರುವುದನ್ನು ಅನುಲಕ್ಷಿಸಿ, ಆಗ್ರಾದಲ್ಲಿ ಹೂತಿದ್ದ ದೇಹವನ್ನು ಹೊರತೆಗೆದು, ಅಫಘಾನಿಸ್ತಾನ-ತಜಕಿಸ್ತಾನ ಗಡಿ ಬಳಿಯ ಕಾಬೂಲ್ ಪಕ್ಕದ ಆತನ ಊರಿನಲ್ಲಿ ಸಮಾಧಿ ಮಾಡಲಾಗಿತ್ತು. ಆ ಸ್ಥಳಕ್ಕೆ "ಬಾಬುರ್ ಗಾರ್ಡನ್"ಎನ್ನುತ್ತಾರಂತೆ.

ನಾನು ಬೆಂಗಳೂರಿಗೆ ವಾಪಸ್ ಬಂದ ಮೇಲೆ ಈ ಕಥೆ ಮರಳಿ ನೆನಪಾದದ್ದು ಬೇರೊಮ್ಮೆ ನಾನು ಕಾಬೂಲಿಗೆ ಹೋಗಿದ್ದಾಗ. ನಮ್ಮ "ಸಿಬಿಆರ್ ನೆಟ್ ವರ್ಕ್" ಸಂಸ್ಥೆಯು ಅಂಗವಿಕಲ ಮಕ್ಕಳ ಪಾಲಕ/ ಪೋಷಕರಿಗಾಗಿ ಅಫಘಾನಿಸ್ತಾನದಲ್ಲಿ ಯುನೈಟೆಡ್ ನೇಷನ್ಸ್ ಆಫ್ ಡೆವಲಪ್‌ಮೆಂಟ್ ಪ್ರೋಗ್ರಾಂನ ಆಶ್ರಯದಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಆ ಕಾರ್ಯಕ್ರಮಕ್ಕೆ ಸಲಹಾಕಾರಳಾಗಿ ನಾನು ಕಾಬೂಲಿಗೆ ಹೋಗಿದ್ದೆ. ಬಾಬರ್ ಸಮಾಧಿ ಇರುವ ಸ್ಥಳ ಕಾಬೂಲಿನಿಂದ 8-10 ಕಿ.ಮೀ. ದೂರದಲ್ಲಿದೆ. ಕುತೂಹಲದಿಂದ ಅಲ್ಲಿಗೆ ಹೋದಾಗ ಪಿಎಚ್‌ಡಿ ಮಾಡುತ್ತಿದ್ದ ಯುವಕ ಹೇಳಿದ್ದೆಲ್ಲ ಅಕ್ಷರಶಃ ನಿಜವಿತ್ತು. "ನಾನು ಕಾಫಿರ್ ದೇಶದಲ್ಲಿ ಮಲಗಿಕೊಳ್ಳುವುದಿಲ್ಲ. ಇಲ್ಲಿ ಶಾಂತವಾಗಿ ಮಲಗಿಕೊಳ್ಳುತ್ತೇನೆ" ಎಂದು ಆ ಸಮಾಧಿಯ ಮೇಲೆ ಬರೆಯಲಾಗಿತ್ತು. ಆತನ ಮತ್ತೊಂದು ಇಚ್ಛೆಯಂತೆ, ಅವನ ಸಮಾಧಿಯ ಸುತ್ತ ಕಬ್ಬಿನ ಜಲ್ಲೆಗಳಿದ್ದವು. ಅಂದರೆ, ಬಾಬರನ ಬಗ್ಗೆ ನಮ್ಮ ಇತಿಹಾಸಕಾರರೆಲ್ಲರೂ ಬರೆದಿರುವುದು ಶುದ್ಧಾಂಗ ಸುಳ್ಳು! ಅಫಘಾನಿಸ್ತಾನದಲ್ಲಿ ನಾನಿದ್ದ 5 ದಿನಗಳಲ್ಲಿ ಸಸ್ಯಾಹಾರಿಯಾಗಿದ್ದ ನನಗೆ ಬರೀ ಹಣ್ಣು ತಿಂದು ಬೇಸರವಾಗಿ ಭಾರತದ ಆಹಾರ ತಿನ್ನಬೇಕು ಎನಿಸಿತ್ತು. ಅಫಘಾನಿಸ್ತಾನದಲ್ಲಿ ಹಿಂದುಗಳ ನಿವಾಸಗಳೇ ಕಂಡುಬರಲಿಲ್ಲ. ನನ್ನ ಸ್ನೇಹಿತೆ ಡಾ. ಯಾಸ್ಮೀನ್ ಅವರು ಹಿಂದುಗಳ ನಿರಾಶ್ರಿತರ ಕ್ಯಾಂಪ್ ಶಿಬಿರಕ್ಕೆ ಭೇಟಿ ನೀಡುವಂತೆ ಸೂಚಿಸಿದ ಮೇರೆಗೆ ಆ ಶಿಬಿರಕ್ಕೆ ಹೋದೆ.

ಅಲ್ಲಿ ಇನ್ನೊಂದು ಆಘಾತ ಕಾದಿತ್ತು. ಅಫಘಾನಿಸ್ತಾನದಲ್ಲೇ ಹುಟ್ಟಿ ಬೆಳೆದ ಹಿಂದುಗಳ ಆಸ್ತಿಯನ್ನು ಅಲ್ಲಿಯ ಜಮೀನುದಾರರು ಮತ್ತು ವ್ಯಾಪಾರಸ್ಥರು ಕಿತ್ತುಕೊಂಡು, ಅವರೆಲ್ಲರನ್ನೂ ನಿರಾಶ್ರಿತರ ಶಿಬಿರದಲ್ಲಿಟ್ಟಿದ್ದರು. ಮಕ್ಕಳು, ಮಹಿಳೆಯರು, ವೃದ್ಧರು, ಅಂಗವಿಕಲರು, ರೋಗಿಗಳು ಇದ್ದ ಆ ಸ್ಥಳ ಶೋಚನೀಯವಾಗಿತ್ತು. ಅಲ್ಲಿಯೇ ಚಿಕ್ಕದೊಂದು ಗುರುದ್ವಾರದಲ್ಲಿ ಲಂಗರ್ (ಉಚಿತ ಭೋಜನಶಾಲೆ) ನಡೆಯುತ್ತಿತ್ತು. ಹಿಂದೂಗಳ ದುಃಸ್ಥಿತಿಯನ್ನು ನೋಡಿ ವಿಷಾದವಾಯಿತು. ಅವರ ಸ್ಥಿತಿಗತಿಗಳ ಬಗ್ಗೆ ವಿಚಾರಿಸಿದಾಗ ಅವರು, "ಅಫಘಾನಿಸ್ತಾನ ನಮ್ಮ ಮಾತೃಭೂಮಿ. ನಾವು ಇಲ್ಲೇ ತಲತಲಾಂತರದಿಂದ ಹುಟ್ಟಿ ಬೆಳೆದವರು. ನಮಗೆ ಭಾರತಕ್ಕೆ ಬರಬೇಕು ಎಂಬ ಆಸೆಯಿಲ್ಲ. ಆದರೆ, ನಾವು ಕಾಯಿಲೆ ಬಿದ್ದಾಗ ದೆಹಲಿಗೆ ಚಿಕಿತ್ಸೆಗೆಂದು ಬರುತ್ತೇವೆ. ಆಗ ಭಾರತದವರು ನಮಗೆ ಆರೋಗ್ಯ ವೀಸಾ ನೀಡಲು ತೊಂದರೆ ಕೊಡುತ್ತಾರೆ. ಭಾರತದಲ್ಲಿ ನಮ್ಮ ಮಕ್ಕಳ ಓದಿಗಾಗಿ 20 ಪಟ್ಟು ಹೆಚ್ಚು ಶುಲ್ಕ ಹಾಕುತ್ತಾರೆ. ಈ ಶುಲ್ಕ ಕಡಿಮೆ ಮಾಡಿಸಬೇಕು" ಎಂದರು. ಬೆಂಗಳೂರಿಗೆ ವಾಪಸ್ ಬಂದ ಮೇಲೆ ನಾನು ಶ್ರೀ ಅನಂತಕುಮಾರ್ ಅವರನ್ನು ಭೇಟಿಮಾಡಿ ಅಫಘಾನಿಸ್ತಾನದ ಹಿಂದೂಗಳ ಪರಿಸ್ಥಿತಿಯ ಬಗೆಗೆ ನಾನು ಕಂಡುದನ್ನೂ, ಅವರ ಬೇಡಿಕೆಯನ್ನೂ ತಿಳಿಸಿದೆ. ಈ ವಿಷಯದ ಬಗ್ಗೆ ಅಂದಿನ ಪ್ರಧಾನಿ ಅಟಲ್‌ಜೀಯವರ ಹತ್ತಿರ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ ಎಂದು ಕೇಳಿದೆ. ಅದೇ ಕಾಲಕ್ಕೆ, ಬೆಂಗಳೂರಿನ ಬುಲ್ ಟೆಂಪಲ್ ರಸ್ತೆಯ ಶಿವಯೋಗಿ ಆಶ್ರಮ/ಕ್ಷೇತ್ರದಲ್ಲಿ ಬಿಜೆಪಿಯ ಬೈಠಕ್ ಏರ್ಪಾಡಾಗಿತ್ತು. ಅಲ್ಲಿಗೆ ಅಟಲ್ ಜೀಯವರೂ ಬರುವವರಿದ್ದರು. ಅನಂತಕುಮಾರರು ನನಗೆ ಫೋನ್ ಮಾಡಿ "ಇಲ್ಲಿಗೆ ಬಂದು ಬಿಡಿ" ಎಂದರು. ಅಲ್ಲಿ ಅಟಲ್‌ಜೀಯವರಿಗೆ ನನ್ನನ್ನು ಪರಿಚಯಿಸಿ ಹೊರಟು ಹೋದರು. ನಾನು ನನ್ನ ಅಫಘಾನಿಸ್ತಾನದ ಅನುಭವಗಳನ್ನು ಅವರಿಗೆ ತಿಳಿಸಿದೆ. ಅವರು ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಟಿಪ್ಪಣಿ ಬರೆದುಕೊಂಡರು. ನಂತರ, ಸುಷ್ಮಾ ಸ್ವರಾಜ್ ಅವರಿಗೆ ಫೋನ್ ಮಾಡಿ "ಅಫಘಾನಿಸ್ತಾನಕ್ಕೆ ತಕ್ಷಣ ಹೊರಡಬೇಕು. ಎರಡು ಕೆಲಸಗಳಿವೆ" ಎಂದು ಸೂಚಿಸಿದರು. ನಂತರ, ಅಟಲ್ ಜೀ ನನ್ನತ್ತ ತಿರುಗಿ "ಇದೆಲ್ಲ ನನಗೆ ಗೊತ್ತಿದೆ; ಆದರೆ, ಎಲ್ಲವನ್ನೂ ನಾವೇ ಮಾಡಲಿಕ್ಕೆ ಆಗುವುದಿಲ್ಲ. ಇಂತಹ ಸಮಸ್ಯೆಗಳಿಗೆ ಸೇವಾ ಸಂಸ್ಥೆಗಳೇ ಪರಿಹಾರ ಹುಡುಕಬೇಕು" ಎಂದರು.



**ಶ್ರೀಮತಿ ಇಂದುಮತಿ ರಾವ್**
**ಸಿಬಿಆರ್ ನೆಟ್ ವರ್ಕ್ ಸಂಸ್ಥೆಯ ಕ್ಷೇತ್ರೀಯ ಮಾರ್ಗದರ್ಶಕರು**

ನಂತರ, ಸುಷ್ಮಾ ಸ್ವರಾಜ್ ಅವರು ಅಫಘಾನಿಸ್ತಾನಕ್ಕೆ ಹೋಗಿ ಅಲ್ಲಿನ ಹಿಂದೂಗಳ ಎರಡು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಂಡಿದ್ದರು. ಇದೆಲ್ಲದರ ಹಿಂದೆ ಅನಂತಕುಮಾರರ ಒತ್ತಾಸೆಯಿದ್ದುದರಲ್ಲಿ ಯಾವ ಸಂದೇಹವೂ ಇಲ್ಲ. ನಾನು ಅವರಿಗೆ ಧನ್ಯವಾದಗಳನ್ನು ಹೇಳಲು ಹೋದರೆ, "ಅಯ್ಯೋ! ನಾನೇನು ಮಹಾ ಮಾಡಿದೆ. ಅದು ದೊಡ್ಡ ವಿಷಯವಲ್ಲ" ಎಂದು ಮಾತು ತೇಲಿಸಿಬಿಟ್ಟರು. ತಾವು ಮಾಡಿದ ಕೆಲಸದ ಬಗ್ಗೆ ಎಂದೂ ಹೇಳಿಕೊಳ್ಳದ ಸರಳ ವ್ಯಕ್ತಿತ್ವ, ಅನಂತಕುಮಾರರದು. ◆



**ಅನಂತಪಥ ಪತ್ರಿಕೆಯ 47ನೆಯ ಸಂಚಿಕೆಯನ್ನು ಪ್ರಸಿದ್ಧ ಇತಿಹಾಸಕಾರ ಹಾಗೂ ಸಂಶೋಧಕ, ಡಾ. ದೇವರಕೊಂಡಾರೆಡ್ಡಿಯವರು ದಿನಾಂಕ 22/05/2024ರಂದು ಬಿಡುಗಡೆ ಮಾಡಿದರು.**



## ಶ್ರದ್ಧಾಂಜಲಿ

**ಮಾಜಿ ವಿಧಾನ ಪರಿಷತ್ ಸದಸ್ಯ, ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ, ಶ್ರೀ ಎಂ.ಬಿ. ಭಾನುಪ್ರಕಾಶ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ**

# ಡಾ. ದೇವರಕೊಂಡಾರೆಡ್ಡಿಯವರಿಗೆ ಅದಮ್ಯ ಚೇತನದ ಸನ್ಮಾನ



ಕರ್ನಾಟಕದ ಶಾಸನ ತಜ್ಞ ಡಾ. ದೇವರಕೊಂಡಾರೆಡ್ಡಿಯವರ 75 ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅಭಿನಂದನಾ ಸಮಿತಿಯು 2024ರ ಜೂನ್ 9 ರಂದು ಬೆಂಗಳೂರಿನ ಮಿಥಿಕ್‌ಸೊಸೈಟಿಯ ಶತಮಾನೋತ್ಸವ ಸಭಾಂಗಣದಲ್ಲಿ ಸನ್ಮಾನ ಸಮಾರಂಭವನ್ನು ಆಯೋಜಿಸಿತ್ತು. ಡಾ. ದೇವರಕೊಂಡಾರೆಡ್ಡಿ ದಂಪತಿಗಳನ್ನು ಅದಮ್ಯ ಚೇತನ ಸಂಸ್ಥೆ ಹಾಗೂ ಅನಂತಕುಮಾರ ಪ್ರತಿಷ್ಠಾನದ ಪರವಾಗಿ ಶ್ರೀ ಟಿ.ಎಸ್. ಗೋಪಾಲ್ ಅವರು ಸನ್ಮಾನಿಸಿದರು.

ಡಾ. ದೇವರಕೊಂಡಾರೆಡ್ಡಿಯವರು ಸನ್ಮಾನಕ್ಕೆ ಪ್ರತಿಕ್ರಿಯೆಯಾಗಿ ಮಾತನಾಡುತ್ತ ಪ್ರಾಚೀನ ದೇವಾಲಯಗಳು ಮತ್ತು ಶಾಸನಗಳ ಸಂಶೋಧನೆ ಮತ್ತು ಅಧ್ಯಯನದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅನೇಕ ಸಂಘ ಸಂಸ್ಥೆಗಳನ್ನು ಸ್ಮರಿಸಿಕೊಳ್ಳುತ್ತ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಅದಮ್ಯ ಚೇತನ ಸಂಸ್ಥೆಯ ಪಾತ್ರವನ್ನೂ ಸ್ಮರಿಸಿಕೊಂಡರು.

ಡಾ. ದೇವರಕೊಂಡಾರೆಡ್ಡಿಯವರು ಅದಮ್ಯ ಚೇತನದ ಸಹಸಂಸ್ಥೆಯಾಗಿರುವ ಅನಂತಕುಮಾರ್ ಪ್ರತಿಷ್ಠಾನವು ಎಐಸಿಟಿಇ ಪ್ರಾಯೋಜಕತ್ವದಲ್ಲಿ ನಡೆಸುತ್ತಿರುವ "ದೇವಾಲಯಗಳ ಸಾಮಾಜಿಕ ಮಹತ್ವ" ಮತ್ತು "ಶಾಸನಗಳಲ್ಲಿ ಸಾಮಾಜಿಕ ವ್ಯವಸ್ಥೆ" ಎಂಬ ಕಾರ್ಯಕ್ರಮಗಳ ಮಾರ್ಗದರ್ಶಕರಾಗಿದ್ದಾರೆ. ◆



**ಅದಮ್ಯ ಚೇತನದ ಕೇಂದ್ರ ಕಟ್ಟಡದಲ್ಲಿರುವ ಸಭಾಂಗಣವನ್ನು ವಿಸ್ತರಿಸಿ ನವೀಕರಿಸಲಾಗಿದೆ. ಸುಸಜ್ಜಿತ ವೇದಿಕೆಯೊಂದಿಗೆ ವಿಸ್ತರಿಸಲಾಗಿರುವ ಸಭಾಂಗಣವನ್ನು ದಿನಾಂಕ ೦೮/೦೬/೨೦೨೪ರಂದು ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ. ವಿ. ಕೃಷ್ಣ ಭಟ್ಟರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು.**

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಮೇನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ ಮ:2.00 ರಿಂದ 3.00 | 4650 | 1,97,700 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ:12.30 ರಿಂದ 1.30 | 3100 | 1,29,800 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ:12.30 ರಿಂದ 1.30 | 2600 | 1,10,500 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ:12.30 ರಿಂದ 1.30 | 4650 | 78,150 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ:12:30ರಿಂದ 1:30ರವರೆಗೆ | 4650 | 33,920 |
| | **ಒಟ್ಟು ಅಂದಾಜು** | **19,650** | **5,50,070** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **438** **19/05/24** | ಗಾಂಧಿ ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ ಬಯೋ-ಪಾರ್ಕ್ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಉದ್ಯಮಿ ಶ್ರೀ ಸುದೀಪ್ ಜೀ, ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು. | 5 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಿ, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು. |
| **439** **26/05/24** | ಬೆಂಗಳೂರಿನ ಜ್ಞಾನಭಾರತಿ ವ್ಯಾಪ್ತಿಯ ಕೆಂಗೇರಿ ಉಪನಗರದ ಶ್ರೀ ಸಿದ್ಧವಿನಾಯಕ ದೇವಸ್ಥಾನ, ಕೆಬಿಎಚ್ ಪ್ಲಾಟಿನಂ ಅಪಾರ್ಟ್‌ಮೆಂಟ್ ಹಿಂಭಾಗ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪರ್ಯಾವರಣ ಸಂರಕ್ಷಣ ಪ್ರಾಂತ ಸಂಯೋಜಕ ಶ್ರೀ ಜಯರಾಮ ಬೊಲ್ಲಾಜೆ, ರಾಮಮೂರ್ತಿ ಬೈರಿ ಜೀ, ದೀಪಕ್ ಜೀ, ನಾಗೇಶ್ ಹೆಗಡೆ, ಆರ್.ವಿ. ಎಂಜಿನಿಯರಿಂಗ್ ಕಾಲೇಜು, ಓಷಿಯಾನಿಕ್ ಎಜುಕೇಶನ್ ಸೊಸೈಟಿ, ನೃಪತುಂಗ ವಿ.ವಿ, ಅದಮ್ಯ ಚೇತನದ ಸ್ವಯಂ ಸೇವಕರು ಹಾಗೂ ಸ್ಥಳೀಯರು. | ವಿವಿಧ ಜಾತಿಯ ಒಟ್ಟು 108 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು |
| **440** **02/06/24** | ಗಾಂಧಿ ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ ಬಯೋ-ಪಾರ್ಕ್ | 'ಕೆಚ್ಚೆದೆಯ ಕನ್ನಡತಿ' ಪ್ರಶಸ್ತಿ ಖ್ಯಾತಿಯ ಅನು ಅಕ್ಕ ಅವರು ಸಸ್ಯಾಗ್ರಹದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಪಿಇಎಸ್ ಕಾಲೇಜು, ನೃಪತುಂಗ ಕಾಲೇಜು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಅದಮ್ಯ ಚೇತನದ ಸ್ವಯಂ ಸೇವಕರು ಹಾಗೂ ಸ್ಥಳೀಯರು. | ವಿವಿಧ ಜಾತಿಯ 25 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |
| **441** **09/06/24** | ಬೆಂಗಳೂರಿನ ಆವಲಹಳ್ಳಿ-ಆಂಜನೇಯನಗರ ರಸ್ತೆಯಲ್ಲಿರುವ ಕೆರೆಯ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮಹೇಂದ್ರ ಮೆಹತಾ, ನಚೀಕೇತ್, ಹೇಮಂತ್, ಬೆಂಗಾನಿ, ಮನೋಜ್ ಬೋತ್ರಾ, ಕೈಲಾಸ್ ಹಾಗೂ ತಂಡದ ಸದಸ್ಯರು, ನೃಪತುಂಗ ಕಾಲೇಜು ಹಾಗೂ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಎನ್. ಪ್ರಕಾಶ್ ಹಾಗೂ ಅದಮ್ಯ ಚೇತನದ ಸ್ವಯಂ ಸೇವಕರು ಹಾಗೂ ಸ್ಥಳೀಯರು. | ವಿವಿಧ ಜಾತಿಯ 50 ಗಿಡಗಳನ್ನು ನೆಟ್ಟು, ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |

# ವೃತ್ತಿ ಶಿಕ್ಷಣ ಸಂಸ್ಥೆಗಳ ಸ್ಥಿತಿಗತಿ - ಭಾಗ 2




## ಪಾಲಿಟೆಕ್ನಿಕ್ ಶಿಕ್ಷಣ

ರಾಜ್ಯದ ಪಾಲಿಟೆಕ್ನಿಕ್ ಶಿಕ್ಷಣ ಕಳೆದ ಮೂರು ವರ್ಷಗಳಿಂದ ದುಸ್ಥಿತಿಗೊಳಗಾಗಿದೆ. ಮೂಲ ಸಂರಚನೆ- ತಂತ್ರಜ್ಞಾನದ ಕಲಿಕೆಯ ಸುಧಾರಣೆಯ ಅವಶ್ಯಕತೆಗಳ ಬಗ್ಗೆ ಎಳ್ಳಷ್ಟೂ ಗಮನವಿಲ್ಲದೇ ಇರುವುದು ಇದಕ್ಕೆ ಕಾರಣ. ಜನತಾ ಪಕ್ಷದ ಸರ್ಕಾರದ ಆಳ್ವಿಕೆಯಲ್ಲಿ ಕ್ಯಾಪಿಟೇಶನ್ ಆಧಾರಿತ ಖಾಸಗಿ ಪಾಲಿಟೆಕ್ನಿಕ್ ಗಳು ನಾಯಿಕೊಡೆಗಳಂತೆ ಬೆಳೆದು ನಿಂತಿವೆ. ಇಂದು ಉದ್ಯೋಗಾವಕಾಶದ ಹಲವಾರು ಪಟ್ಟು ಹೆಚ್ಚು ಡಿಪ್ಲೊಮಾಧರರು ಹೊರಬಂದು ನಿರುದ್ಯೋಗ ಸಮಸ್ಯೆ ಇನ್ನಷ್ಟು ಜಟಿಲವಾಗುತ್ತಿದೆ.

**ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರದ ಆಳ್ವಿಕೆಯಲ್ಲಿ ಹಾಗೂ ಅದಕ್ಕೂ ಮುಂಚಿನ ಪಾಲಿಟೆಕ್ನಿಕ್ ಗಳ ಸಂಖ್ಯೆ :** 1947ರ ಪೂರ್ವದಲ್ಲಿ ಒಟ್ಟು 03 ಸರ್ಕಾರಿ ಪಾಲಿಟೆಕ್ನಿಕ್ ಗಳಿದ್ದವು. 1947-51ರವರೆಗೆ ಈ ಸಂಖ್ಯೆ 8ಕ್ಕೆ ಹೆಚ್ಚಿತು. (ಈ ಅಂಕಿಅಂಶಗಳು ಜನತಾ ಪಕ್ಷದ ಸರಕಾರಕ್ಕೆ ಮುನ್ನ) 1951-56ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು 8 ಹಾಗೂ ಖಾಸಗಿ ಅನುದಾನಾಶ್ರಿತ ಪಾಲಿಟೆಕ್ನಿಕ್‌ಗಳು -2. 1979-83ರ ಹೊತ್ತಿಗೆ ಸರಕಾರಿ (29), ಖಾಸಗಿ ಅನುದಾನಾಶ್ರಿತ (8) ಹಾಗೂ ಖಾಸಗಿ ಅನುದಾನರಹಿತ (12) ಸೇರಿ ಒಟ್ಟು 49 ಪಾಲಿಟೆಕ್ನಿಕ್ ಗಳಾದವು. ಜನತಾ ಪಕ್ಷದ ಸರಕಾರದಲ್ಲಿ, 1984-85 ರಲ್ಲಿ ಸರಕಾರಿ (31), ಖಾಸಗಿ ಅನುದಾನಾಶ್ರಿತ (8) ಹಾಗೂ ಖಾಸಗಿ ಅನುದಾನರಹಿತ (58) ಒಟ್ಟು -97. 1986-87ರ ಹೊತ್ತಿಗೆ ಸರಕಾರಿ (32), ಖಾಸಗಿ ಅನುದಾನಾಶ್ರಿತ (8) ಖಾಸಗಿ ಅನುದಾನರಹಿತ (117) ಒಟ್ಟು - 157 ಕ್ಕೆ ತಲುಪಿತು.

ಇದಲ್ಲದೇ ಇನ್ನೂ 25 ಪಾಲಿಟೆಕ್ನಿಕ್ ಗಳಿಗೆ ಉದ್ದೇಶಿತ ಪತ್ರ (Letter of Intent) ಗಳನ್ನುಕೊಡಲಾಗಿದೆ. ಜನತಾ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ಕೇವಲ 12 ಪೂರ್ಣ ಕ್ಯಾಪಿಟೇಶನ್ ಆಧಾರಿತ ಪಾಲಿಟೆಕ್ನಿಕ್ ಗಳಿದ್ದವು. ಕಳೆದ 3 ವರ್ಷಗಳಲ್ಲಿ ಇವುಗಳ ಸಂಖ್ಯೆ 117 ಕ್ಕೇರಿದೆ. ಮೌಲ್ಯಾಧಾರಿತ(ಮೌಲ್ಯ= ಹಣ) ರಾಜಕೀಯಕ್ಕೆ ಜ್ವಲಂತ ಉದಾಹರಣೆ. ತಾಂತ್ರಿಕ ಶಿಕ್ಷಣದ ಉನ್ನತಿಗೋಸ್ಕರ ಕಳಕಳಿಯಿಂದ ಸರಕಾರ ಆರಂಭಿಸಿದ ಪಾಲಿಟೆಕ್ನಿಕ್‌ಗಳ ಸಂಖ್ಯೆ ಕೇವಲ 3.

25 ಸಂಸ್ಥೆಗಳಿಗೆ ಉದ್ದೇಶಿತ ಪತ್ರ (Letter of Intent) ಕೊಟ್ಟು, ವರ್ಷ ಉರುಳಿದರೂ ಈ ಪಾಲಿಟೆಕ್ನಿಕ್‌ಗಳು ಆರಂಭವಾಗದೆಯಿರುವುದು ಡಿಪ್ಲೊಮ ಶಿಕ್ಷಣದ ಅವಶ್ಯಕತೆಗಳ ಕೊರತೆ ಮತ್ತು ಈ ಸಂಸ್ಥೆಗಳ ಅಸಾಮರ್ಥ್ಯಕ್ಕೆ ದ್ಯೋತಕ. ಪಾಲಿಟೆಕ್ನಿಕ್ ಸಂಸ್ಥೆಗಳ ಆರಂಭಕ್ಕೆ ಹಣ, ರಾಜಕೀಯ ಹಿತಾಸಕ್ತಿಯೇ ಪ್ರಧಾನವಾಗಿ ರಾಜ್ಯ ಸರ್ಕಾರ ವಿವೇಚನಾರಹಿತ ನಿರ್ಧಾರಗಳನ್ನು ಕೈಗೊಳ್ಳುತ್ತಿರುವುದೇ ಈ ಸ್ಥಿತಿಗೆ ಕಾರಣ ಎಂಬುದು ಹಗಲಿನಷ್ಟು ಸ್ಪಷ್ಟವಾಗಿದೆ.

ಅನುಮತಿ ಪಡೆದ ಕೆಲವು ಪಾಲಿಟೆಕ್ನಿಕ್‌ಗಳು ಈಗಾಗಲೇ ಪ್ರಾರಂಭ ವಾಗಿದ್ದರೂ ಇನ್ನುವರೆಗೂ ತಾಂತ್ರಿಕ ನಿರ್ದೇಶನಾಲಯಕ್ಕೆ ವರದಿ ಮಾಡಿಕೊಂಡಿಲ್ಲ. ಉದಾ : ಹುಬ್ಬಳ್ಳಿಯ ಸರಕಾರೀ ನೌಕರರ ಸಂಘದ ಪಾಲಿಟೆಕ್ನಿಕ್, ಕಲ್ಬುರ್ಗಿಯ ರಾಜಾಪುರ ಪಾಲಿಟೆಕ್ನಿಕ್. ರಾಜ್ಯದ ಅಭಿವೃದ್ಧಿ ಮತ್ತು ಪ್ರಾದೇಶಿಕ ಅವಶ್ಯಕತೆಗಳಿಗನುಗುಣವಾಗಿ ಪಾಲಿಟೆಕ್ನಿಕ್ ವಿವಿಧ ಕೋರ್ಸ್‌ಗಳನ್ನು ನೀಡದೇ ಸಾಮಾನ್ಯವಾಗಿರುವ ಕೋರ್ಸ್ ಗಳನ್ನೇ ನೀಡುತ್ತಿದ್ದಾರೆ, ಅಭಿವೃದ್ಧಿ, ಪ್ರಾದೇಶಿಕ ಅವಶ್ಯಕತೆ ಮತ್ತು ಕೃಷಿ ತಂತ್ರಜ್ಞಾನಕ್ಕೆ ಪೂರಕವಾಗಿರುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಯುವಕರಿಗೆ ಅರ್ಥಪೂರ್ಣ ತರಬೇತಿ ಕೊಡುವುದಾಗಿ ಜನತಾಪಕ್ಷದ ಸರ್ಕಾರ ಹೇಳಿಕೊಂಡಿದೆ. ಈ ಹಿನ್ನೆಲೆಯಲ್ಲಿ, ಈವತ್ತಿನ ಚಿತ್ರ ಮಾತು ಮತ್ತು ಕೃತಿಗಳಿಗಿರುವ ಅಸಾಮಾನ್ಯ ಅಂತರವನ್ನು ಮೂಡಿಸುತ್ತದೆ.

ರಾಜ್ಯದಲ್ಲಿ ಅಂದಾಜು 106 ಪಾಲಿಟೆಕ್ನಿಕ್‌ಗಳಲ್ಲಿ ಸಿವಿಲ್ ವಿಭಾಗವಿದೆ. 88 ಪಾಲಿಟೆಕ್ನಿಕ್‌ಗಳಲ್ಲಿ ಮೆಕ್ಯಾನಿಕಲ್ ವಿಭಾಗ, 85 ಪಾಲಿಟೆಕ್ನಿಕ್‌ಗಳಲ್ಲಿ ಟೆಲಿಕಮ್ಯೂನಿಕೇಶನ್, 62 ಪಾಲಿಟೆಕ್ನಿಕ್‌ಗಳಲ್ಲಿ ಎಲೆಕ್ಟ್ರಿಕಲ್, 53 ಪಾಲಿಟೆಕ್ನಿಕ್‌ಗಳಲ್ಲಿ ಆಟೋಮೊಬಾಯಿಲ್ ವಿಭಾಗಗಳಿವೆ.

ಕೃಷಿಪ್ರಧಾನವಾದ ನಮ್ಮ ನಾಡಿನಲ್ಲಿ ರೈತಹಿತೈಷಿಯೆಂದು ಬೊಗಳೆ ಹೊಡೆಯುವ ನೇತೃತ್ವವಿರುವ ಸರ್ಕಾರದಡಿಯಲ್ಲಿ ಇರುವ 157 ಪಾಲಿಟೆಕ್ನಿಕ್‌ಗಳಲ್ಲಿ ಎಲ್ಲಿಯೂ ಕೃಷಿ ತಂತ್ರಜ್ಞಾನದ ಕೋರ್ಸ್ ಇಲ್ಲ.

ರಾಯಚೂರಿನಲ್ಲಿರುವ ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೊಳಪಡುವ ಒಂದು ಪಾಲಿಟೆಕ್ನಿಕ್‌ನಲ್ಲಿ ಮಾತ್ರ ಕೃಷಿ ತಂತ್ರಜ್ಞಾನದ ಬಗ್ಗೆ ಬೋಧಿಸುತ್ತಿರುವರು, ಪ್ರಾದೇಶಿಕ ಅಭಿವೃದ್ಧಿ ಮತ್ತು ಅವಶ್ಯಕತೆಗಳಿನುಗುಣವಾಗಿ ಕೋರ್ಸ್‌ಗಳಿಲ್ಲ. ಇದು ಕೆಲವು ವಿಭಾಗಗಳಲ್ಲಿ ಅನಾವಶ್ಯಕ ಒತ್ತಡ; ಅದರಿಂದ ಸಹಜವಾಗಿ ನಿರುದ್ಯೋಗ, ಇನ್ನೂ ಕೆಲವೆಡೆ ಪ್ರಗತಿಯನ್ನೇ ಕುಂಠಿತಗೊಳಿಸುವ ಕೊರತೆಗಳಿಗೆ ಕಾರಣವಾಗಿದೆ.

**ಪ್ರವೇಶಾವಕಾಶದ ಸ್ಫೋಟಕ ಸಂಖ್ಯೆ:** 1979-80ರಲ್ಲಿ, ಸರ್ಕಾರಿ (3929), ಖಾಸಗಿ ಅನುದಾನಾಶ್ರಿತ (830), ಖಾಸಗಿ ಅನುದಾನರಹಿತ (60), ಒಟ್ಟು- 4819. 1984 ರಲ್ಲಿ, ಸರ್ಕಾರಿ (4963), ಖಾಸಗಿ ಅನುದಾನಾಶ್ರಿತ (1210), ಖಾಸಗಿ ಅನುದಾರಹಿತ (3955) ಒಟ್ಟು -10,117. ಹಾಗೂ 1986-87ರಲ್ಲಿ, ಸರ್ಕಾರಿ (5465), ಖಾಸಗಿ ಅನುದಾನಾಶ್ರಿತ (1560), ಖಾಸಗಿ ಅನುದಾನರಹಿತ (14,844), ಒಟ್ಟು-21,869.

ಮೂರೇ ವರ್ಷಗಳಲ್ಲಿ 6179 ರಿಂದ 21869 ಸೀಟುಗಳಿಗೆ ಜಿಗಿತ. ಹಿಂದಿನ ಮೂರು ದಶಕಗಳಲ್ಲಿ ಸಾಧಿಸಿದಷ್ಟು ಪ್ರಗತಿಯ ಕೀರ್ತಿ ಶ್ರೀ ಹೆಗಡೆಯವರ ಸರ್ಕಾರಕ್ಕೆ ದೊರಕಬೇಕು. ವಾರ್ಷಿಕ ಹೆಚ್ಚಳ ಸರಾಸರಿ 5056 ಮಾತ್ರ. ಖಾಸಗೀ ಅನುದಾನರಹಿತ ಸಂಸ್ಥೆಗಳ ಹೆಚ್ಚಳದೊಂದಿಗೆ ಕ್ಯಾಪಿಟೇಷನ್ ಸೀಟುಗಳ ಸ್ಫೋಟ ಸ್ಪಷ್ಟ 1986-87ರ ಸಂಖ್ಯೆ 14,844.

ಪ್ರತಿಭೆಗೆ ಹೇಗಿದೆ ಖೊಕ್? ನಮ್ಮ ರಾಜ್ಯದಲ್ಲಿ ಅದಕ್ಕೆ ಸ್ಥಾನವಿಲ್ಲ, ರಸ್ತೆಗೇ ಸರಿ. ರಾಜ್ಯದಲ್ಲಿ ಡಿಪ್ಲೊಮಾಧರರ ಅವಶ್ಯಕತೆ 1980ರ ಸರ್ಕಾರಿ ಸರ್ವೇಕ್ಷಣೆಯ ಪ್ರಕಾರ 840 ಮಾತ್ರ, (82-83ರ ವರೆಗೆ ಪ್ರತಿಸಾಲಿಗೆ). ಈಗ ಈ ಸಂಖ್ಯೆ ಸ್ವಲ್ಪ ಜಾಸ್ತಿಯಾಗಿರಬಹುದು. ಆದರೆ ಎಷ್ಟು? ಯಾವ ಪ್ರಮಾಣದಲ್ಲಿ? ಎಂಬುದು ಯಕ್ಷ ಪ್ರಶ್ನೆಗಳು. ◆

## ಗೀತೆಯ ಸಂದೇಶ



**ಆಯುಃ ಸತ್ತ್ವಬಲಾರೋಗ್ಯಸುಖಪ್ರೀತಿ ವಿವರ್ಧನಾಃ |**
**ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ವಿಕಪ್ರಿಯಾಃ** ||೧೭.೮||

**ಆಯುಃ** – ಆಯುಸ್ಸು; **ಸತ್ತ್ವ** – ಬದುಕಲು ಪೂರಕವಾದ ಶಕ್ತಿ, ವೀರ್ಯ; **ಬಲ** - ದೈಹಿಕ ಶಕ್ತಿ; **ಆರೋಗ್ಯ** - ಆರೋಗ್ಯ; **ಸುಖ** – ಸುಖ; **ಪ್ರೀತಿ** - ಪ್ರೀತಿ (ಇವುಗಳನ್ನು) **ವಿವರ್ಧನಾಃ** – ಹೆಚ್ಚಿಸುವ; **ರಸ್ಯಾಃ** - ರಸಭರಿತವಾದ (ಜೀವಸತ್ವಭರಿತವಾದ); **ಸ್ನಿಗ್ಧಾಃ** – ಸೌಮ್ಯವಾದ, ಹಿತವಾದ, ಕೊಬ್ಬುಭರಿತವಾದ; **ಸ್ಥಿರಾ** - ಬುದ್ಧಿಚಾಂಚಲ್ಯ ಉಂಟುಮಾಡದ; **ಹೃದ್ಯಾ** - ಮನಸ್ಸಿಗೆ ಒಪ್ಪುವ **ಆಹಾರಾಃ** - ಆಹಾರಗಳು **ಸಾತ್ವಿಕಪ್ರಿಯಾಃ** - ಸಾತ್ವಿಕರಿಗೆ ಇಷ್ಟವಾಗುತ್ತವೆ.

ಮನುಷ್ಯನ ಗುಣ ಅವನು ಸೇವಿಸುವ ಆಹಾರವನ್ನು ಅವಲಂಬಿಸಿರುತ್ತದೆ. ಸಾತ್ವಿಕರಾಗಿ ಬದುಕಲು ಬಯಸುವವರು ಆಯುಸ್ಸು, ದೈಹಿಕ ಹಾಗೂ ಮಾನಸಿಕ ಶಕ್ತಿ ಮತ್ತು ಆರೋಗ್ಯಗಳನ್ನು ಹೆಚ್ಚಿಸುವ ಆಹಾರವನ್ನು ಸೇವಿಸಬೇಕು. ಸೇವಿಸಿದ ಆಹಾರ ಸುಖವನ್ನು ನೀಡಬೇಕು, ಅಂದರೆ ಅದು ಸುಲಭವಾಗಿ ಜೀರ್ಣವಾಗಬೇಕು, ಉದರ, ವಾಯು ಪ್ರಕೋಪಗಳಿಗೆ ಕಾರಣವಾಗಬಾರದು. ಹಿತವಾದ, ಸೌಮ್ಯವಾದ ಹದವಾದ ಕೊಬ್ಬಿನಿಂದ ಕೂಡಿರಬೇಕು. ಮನಸ್ಸಿನ ಚಂಚಲತೆಯನ್ನು ಉಂಟುಮಾಡಬಾರದು. ಆಹಾರವು ಹೃದಯಕ್ಕೆ ಒಪ್ಪುವಂತಿರಬೇಕು.

ಗೀತೆಯ ನಿರೂಪಣೆಯ ಬೆಳಕಿನಲ್ಲಿ ನೀವು ಸೇವಿಸುವ ಆಹಾರ ಹೇಗಿದೆ ಎಂದು ಪರೀಕ್ಷಿಸಿಕೊಳ್ಳಿ.

## ತಿಂಗಳ ವರದಿ (15 ಮೇ - 15 ಜೂನ್ 2024)

# ಆರೋಗ್ಯಕರ ಪರಿಸರ ಸೃಷ್ಟಿ ಅನಿವಾರ್ಯ

**ತೇಜಸ್ವಿನಿ ಅನಂತಕುಮಾರ್**




ದೇಶದಲ್ಲಿ ಆರೋಗ್ಯಕರ ಪರಿಸರ ಸೃಷ್ಟಿಕಾರ್ಯ ಅನಿವಾರ್ಯವಾಗಿದೆ ಎಂದು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅಭಿಪ್ರಾಯಪಟ್ಟರು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕಲ್ಲಡ್ಕದ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಜೂನ್ ೧ರಂದು 'ಸ್ವಚ್ಛ ಭಾರತಕ್ಕಾಗಿ ಸ್ವಚ್ಛ ಪರಿಸರ' ಎಂಬ ವಿಷಯದ ಮೇಲೆ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ಸೃಷ್ಟಿ ಎಂಬುದು ಕೇವಲ ನೈಸರ್ಗಿಕವಾಗಿ ಅಲ್ಲ; ಅದು ಮನೆ, ಕುಟುಂಬ, ಸಮಾಜ ಒಳಗೊಂಡಂತೆ ವಿಶಾಲಾರ್ಥದಲ್ಲಿ ದೇಶದ ಒಟ್ಟು ಪರಿಸ್ಥಿತಿಯನ್ನು ಒಳಗೊಂಡಿದೆ. ವಿಶ್ವಕ್ಕೆ ಮಾದರಿಯಾಗುವ ಸಂಸ್ಕೃತಿ ನಮ್ಮದಾಗಿದ್ದರೂ ಮನೆ, ಕುಟುಂಬ, ಸಮಾಜಗಳು ಈ ಸಂಸ್ಕೃತಿಯ ಅರಿವಿಲ್ಲದೇ ದೂರ ಸರಿಯುತ್ತಿವೆ. ಇದಕ್ಕೆ ನಮ್ಮ ಶೈಕ್ಷಣಿಕ ವ್ಯವಸ್ಥೆಯೂ ಕಾರಣವಾಗಿದೆ. ಪರಿಸರ ಸಂರಕ್ಷಣೆ ಎಂದು ಜಾಗೃತಿ ಸಮಾವೇಶ, ವಿಚಾರ ಸಂಕಿರಣ, ಶಿಬಿರಗಳು ನಡೆಯುತ್ತಿದ್ದರೂ ಮಾಲಿನ್ಯ ಹೆಚ್ಚುತ್ತಿದೆ. ಮರಗಳು ನಾಶವಾಗುತ್ತಿವೆ. ಉಸಿರಾಡಲು ಶುದ್ಧ ಆಮ್ಲಜನಕ ಸಿಗದ ಸ್ಥಿತಿಯಲ್ಲಿದ್ದೇವೆ. ಈ ಕುರಿತು, ಗಂಭೀರವಾಗಿ ಯೋಚಿಸದಿದ್ದರೆ ದೇಶದ ಭವಿಷ್ಯವು ಭೀಕರವಾಗಿ ಪರಿಣಮಿಸಲಿದೆ ಎಂದು ಎಚ್ಚರಿಸಿದರು. ಪುತ್ತೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಕಲ್ಲಡ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ ಅವರು ಅಧ್ಯಕ್ಷತೆ ವಹಿಸಿದ್ದರು. ಪರಿಸರ ಸಂರಕ್ಷಣೆ ಕುರಿತು ನಂತರ ನಡೆದ ವಿವಿಧ ಗೋಷ್ಠಿಗಳಲ್ಲಿ ಪರಿಸರ ಚಿಂತಕರಾದ ಶ್ರೀ ಶಿವಾನಂದ ಕಳವೆ, ಡಾ. ನರೇಂದ್ರ ರೈ ದೇರ್ಲ, ಡಾ. ಕೆ.ಆರ್. ಹರ್ಷ, ಕೃಷಿಕರಾದ ಶ್ರೀ ವಸಂತ ಕಜೆ, ವೆಂಕಟೇಶ ಸಂಗನಾಳ ಅವರು ತಮ್ಮ ವಿಚಾರಗಳನ್ನು ಮಂಡಿಸಿದರು.

ಪರಿಸರ ಕುರಿತು ವಿದ್ಯಾರ್ಥಿಗಳು ಆಯೋಜಿಸಿದ್ದ ವಸ್ತು ಪ್ರದರ್ಶನ ಗಮನ ಸೆಳೆಯಿತು. ಸುಮಾರು 45 ವಿದ್ಯಾಸಂಸ್ಥೆಗಳ ಶಿಕ್ಷಕರು, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು.

**ನವೀಕೃತ ಸಭಾಂಗಣದ ಉದ್ಘಾಟನೆ:** ಅದಮ್ಯಚೇತನದ ಚಟುವಟಿಕೆಗಳು ವಿಸ್ತರಿಸುತ್ತಿರುವಂತೆಯೇ ವಿಶಾಲವಾದ ಸುಸಜ್ಜಿತ ಸಭಾಂಗಣದ ಅವಶ್ಯಕತೆ ಎದುರಾಗಿರುವ ಹಿನ್ನೆಲೆಯಲ್ಲಿ, ಅದಮ್ಯ ಚೇತನದ ಕೇಂದ್ರ ಕಟ್ಟಡದಲ್ಲಿರುವ ಸಭಾಂಗಣವನ್ನು ವಿಸ್ತರಿಸಿ ನವೀಕರಿಸಲಾಗಿದೆ. ನವೀಕೃತ ವೇದಿಕೆಯಲ್ಲಿ ೦೮/೦೬/೨೦೨೪ ರಂದು ಎ-ಚಾಟ್ ಕಾರ್ಯಕ್ರಮ ನಡೆಯಿತು.

ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಸಂಸ್ಥೆಯ ಇತ್ತೀಚಿನ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿದರು. ಇದೇ ತಿಂಗಳ ವಿಶೇಷ ಕಾರ್ಯಕ್ರಮವೊಂದರಲ್ಲಿ ಜಾಗತಿಕ ಪರಿಸರ ದಿನಾಚರಣೆ (ಜೂನ್ ೫) ನಿಮಿತ್ತ ಅಯೋಧ್ಯೆಯಲ್ಲಿ ೧೦೦ ಗಿಡಗಳನ್ನು ನೆಡಲಾಯಿತು. ಅನಂತಕುಮಾರರು ಆರಂಭಿಸಿದ ಸಸ್ಯಾಗ್ರಹದ ಭಾಗವಾಗಿ ಮತ್ತು ಅವರ ಹುಟ್ಟುಹಬ್ಬದ ಅಂಗವಾಗಿ ಮುಂಬರುವ ಜು. ೨೨ರಂದು ಅಯೋಧ್ಯೆಯಲ್ಲಿ ३೦೦ ಗಿಡಗಳನ್ನು ನೆಡುವ ಯೋಜನೆ ಇದೆ. ೨೦೧೬ರಲ್ಲಿ ಶ್ರೀ ಅನಂತಕುಮಾರರು ಆರಂಭಿಸಿದ ಸಸ್ಯಾಗ್ರಹವು ಈಗ ೪೪೧ನೇ ಹಸಿರು ಭಾನುವಾರವನ್ನು ಪೂರ್ಣಗೊಳಿಸಿದೆ. ಈ ಯೋಜನೆಯನ್ನು ಹುಬ್ಬಳ್ಳಿ ಹಾಗೂ ಕಲಬುರಗಿಯಲ್ಲೂ ಹಂತಹಂತವಾಗಿ ಕಾರ್ಯಗತಗೊಳಿಸಲಾಗುವುದು ಎಂದೂ ವಿವರಿಸಿದರು. 'ಅನಂತಚೇತನ ಕೇಂದ್ರದ ಸಂಚಾಲಕರಾದ ಶ್ರೀ ಟಿ.ಎಸ್. ಗೋಪಾಲ್ ಮಾತನಾಡಿ, ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರದ (ಐಕೆಎಸ್) ಚಟುವಟಿಕೆಗಳ ವಿವರ ನೀಡಿದರು.

ಈ ಸಮಾರಂಭದಲ್ಲಿ ಎ-ಚಾಟ್ ಕಾರ್ಯಕ್ರಮದ ಅಂಗವಾಗಿ ಕಲಾವಿದೆ ಶ್ರೀಮತಿ ಸಂಹಿತಾ ಅವರಿಂದ ಒಡಿಸ್ಸಿ ನೃತ್ಯಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಅಮೆರಿಕೆಯ ಅನಿವಾಸಿ ಕನ್ನಡಿಗರ 'ಅನುಬಂಧ' (KADAK) ಸಂಸ್ಥೆ ಪದಾಧಿಕಾರಿಗಳಾದ ಹೇಮಂತಕುಮಾರ್, ರಮಜಾನ್ ನದಾಫ್, ಡಾ. ತೇಜಸ್ವಿನಿ ಪ್ರಕಾಶ ಅವರನ್ನು ಸನ್ಮಾನಿಸಲಾಯಿತು.

ಶ್ರೀ ಕೆ. ಬಸವರಾಜ್ ಅವರು ಕಲಾವಿದೆ ಕೆ.ಸಂಹಿತಾ ಹಾಗೂ ಅತಿಥಿ ಗಣ್ಯರನ್ನು ಪರಿಚಯಿಸಿದರು. ಕಾವ್ಯ ಜಿ. ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು.

**ಗಣ್ಯರ ಭೇಟಿ:** ಆರ್.ಎಸ್.ಎಸ್. ಮುಖಂಡರಾದ ರಾಜೀವಕುಮಾರ್ ಹಾಗೂ ವಿಜಯಪುರ ಸುಧಾಕರ, ಬೆಂಗಳೂರಿನ ಕೆಂಗೇರಿ ಉಪನಗರ ನಿವಾಸಿ ಶ್ರೀಮತಿ ಮಮತಾ ನಿತ್ಯಾನಂದ ಹಾಗೂ ಕುಟುಂಬದ ಸದಸ್ಯರು, ಅಮೆರಿಕೆಯ ಅನಿವಾಸಿ ಕನ್ನಡಿಗರ ಸಮಾಜಮುಖಿ ಯೋಜನೆಯ 'ಅನುಬಂಧ' (KADAK-Texan Soil, Kannada Soul) ) ಸಂಸ್ಥೆಯವರು, ವಿಜಯಪುರ ಬ್ರಾಹ್ಮಣರ ಸಂಘದ ಮಹಿಳಾ ಮಂಡಳಿಯ 34 ಜನ ಸದಸ್ಯರು ಅದಮ್ಯ ಚೇತನಕ್ಕೆ ಮತ್ತು ಬೆಂಗಳೂರಿನ ವಾಜರಹಳ್ಳಿ ನಿವಾಸಿ ಹಾಗೂ ಬಿಜೆಪಿ ಕಾರ್ಯಕರ್ತ ಮೋಹನಮೂರ್ತಿ, ದಾವಣಗೆರೆಯ ನಿವಾಸಿ ಶ್ರೀ ರವಿಚಂದ್ರರವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.

**ಶಾಲೆಗಳಲ್ಲಿ ರಾಮಾಯಣದ ಬೋಧನೆ ಅತ್ಯಗತ್ಯ:** ಸಮಾಜದಲ್ಲಿ ಆದರ್ಶ ಮತ್ತು ಮೌಲ್ಯಗಳು ಅಳಿವಿನ ಅಂಚಿಗೆ ತಲುಪುತ್ತಿರುವ ಇಂದಿನ ಕಾಲಘಟ್ಟದಲ್ಲಿ ಮಕ್ಕಳಲ್ಲಿ ನಮ್ಮ ಸಂಸ್ಕೃತಿ ಇತಿಹಾಸ ಮತ್ತು ಪರಂಪರೆಯ ಬಗ್ಗೆ ಅರಿವು ಮೂಡಿಸಬೇಕಾದದ್ದು ಅಗತ್ಯ ಎಂದು ಅದನ್ನು ಚೇತನ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅಭಿಪ್ರಾಯ ಪಟ್ಟರು.

"ಮನೆಮನೆಗೂ ರಾಮಾಯಣ - ಪ್ರತಿ ಮಗುವಿಗೂ ರಾಮಾಯಣ" ಶೀರ್ಷಿಕೆಯ ಅಡಿಯಲ್ಲಿ ಹೊನ್ನೇನಹಳ್ಳಿಯಲ್ಲಿರುವ ವಿಶ್ವವಿದ್ಯಾಪೀಠ ಶಾಲೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ "ರಾಮಾಯಣ ದರ್ಶನ – ಪ್ರವಚನ" ಕಾರ್ಯಕ್ರಮದಲ್ಲಿ ಮಾತನಾಡುತ್ತ ನಮ್ಮ ದೇಶ ನಮ್ಮ ಸಂಸ್ಕೃತಿ ಮತ್ತು ಪ್ರಕೃತಿಯ ಬಗ್ಗೆ ರಾಮಾಯಣ ತಿಳಿಸುತ್ತದೆ, ಹಾಗಾಗಿ ಶಾಲಾ ಪಠ್ಯಗಳಲ್ಲಿಯೂ ರಾಮಾಯಣವನ್ನು ಬೋಧಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.◆

## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprazna / ACF / AKP**
Photographs: **Gopal TS / Kengeri Chakrapani / Internet Sources / AKP / ACF**
Sketch: **Raghupathi Sringeri**
Acknowledgements: **Ashok Kumar Raikar / Indumathi Rao / Beluru Sudarshana**
Printed at: **Rashtrothana Mudranalaya, Chamarajpet, Bengaluru**
Published by: **Tejaswini Ananthkumar**

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಶ್ರೀ ಆರ್.ವಿ. ದೇಶಪಾಂಡೆ ಅವರು 2024ರ ಮೇ 31 ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿ 'ಅನ್ನಪೂರ್ಣ' ಅಡುಗೆಮನೆಯನ್ನು ವೀಕ್ಷಿಸಿದರು.




ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಗೋರೆ ಗ್ರಾಮದ ಕೆನರಾ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.



ಉತ್ತರಪ್ರದೇಶದ ರಾಜಧಾನಿ ಲಕ್ನೋದಿಂದ ಶ್ರೀ ಕುಂವರ್ ಜ್ಞಾನಂಜಯ ಸಿಂಗ್ ತಮ್ಮ ಕುಟುಂಬದೊಂದಿಗೆ 2024ರ ಮೇ 23ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದರು. ಅದಮ್ಯ ಚೇತನ ಸಂಸ್ಥೆಯ ಶ್ರೀ ದಿವ್ಯೇಶ್ ಪ್ರತಾಪ್ ಉಪಸ್ಥಿತರಿದ್ದರು.



ವಿಜಯಪುರ ಬ್ರಾಹ್ಮಣರ ಸಂಘದ ಮಹಿಳಾ ಮಂಡಳಿಯ 34 ಜನ ಸದಸ್ಯರು 2024ರ ಜೂನ್ 11 ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು.




ದಿ. 08/06/2024 ರಂದು ಎ-ಚಾಟ್ ಕಾರ್ಯಕ್ರಮದಲ್ಲಿ ಶ್ರೀಮತಿ ಕೆ. ಸಂಹಿತಾ ಅವರಿಂದ ಒಡಿಸ್ಸಿ ನೃತ್ಯ ಪ್ರದರ್ಶನ




ಬೆಂಗಳೂರಿನ ದಯಾನಂದ ಸಾಗರ ಸಂಜೆ ಕಾಲೇಜಿನ ಸುಮಾರು 30 ವಿದ್ಯಾರ್ಥಿಗಳು ಹಾಗೂ ಕಾಲೇಜು ಪ್ರಾಂಶುಪಾಲ ವಿ. ನರೇಂದ್ರ ಅವರು 2024ರ ಜೂನ್ 08ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿ 'ಅನ್ನಪೂರ್ಣ' ಅಡುಗೆಮನೆಯ ಸೇವಾ ಚಟುವಟಿಕೆಗಳನ್ನು ವೀಕ್ಷಿಸಿದರು.



ಅಮೆರಿಕೆಯ ಅನಿವಾಸಿ ಕನ್ನಡಿಗರ ಸಮಾಜಮುಖಿ ಯೋಜನೆಯ 'ಅನುಬಂಧ' (KADAK-Texan Soil, Kannada Soul) ಸಂಸ್ಥೆಯವರು 2024ರ ಜೂನ್ 08ರಂದು ಭೇಟಿ ನೀಡಿ, 'ಅನ್ನಪೂರ್ಣ' ಅಡುಗೆಮನೆಯ ಸೇವಾ ಚಟುವಟಿಕೆಗಳನ್ನು ವೀಕ್ಷಿಸಿದರು

# ಅನಂತ ಚಿತ್ರಸಂಪುಟ

**ಅನಂತಕುಮಾರ್ ಸೈಕಲ್ ಸವಾರಿಯಿಂದ ಮೊದಲುಗೊಂಡು ಮೆಟ್ರೋಸಾರಿಗೆಯವರೆಗೆ ಎಲ್ಲ ಬಗೆಯ ಪರಿಸರ ಸ್ನೇಹಿ ಯೋಜನೆಗಳಿಗೆ ಆದ್ಯತೆ ನೀಡುತ್ತಿದ್ದರು. ಬಿಡುವು ದೊರೆತಾಗಲೆಲ್ಲ ಪರಿಸರ ಸ್ನೇಹಿ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಪ್ರಕೃತಿ - ಪರಿಸರಗಳ ಬಗೆಗೆ ಸಾಮಾಜಿಕ ಜಾಗೃತಿ ಮೂಡಿಸುವುದು ಎಲ್ಲರ ಕರ್ತವ್ಯವೆಂದು ಅವರು ಸದಾ ಹೇಳುತ್ತಿದ್ದರು**





















